ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳೀಮಠ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಪಿ. ಸಂದೇಶ್

ಕರ್ನಾಟಕ ರಾಜ್ಯದ ಪರವಾಗಿ ಇನ್ಸ್ಪೆಕ್ಟರ್ ಆಫ್ ಪೊಲೀಸ್, ಕೊಪ್ಪ -ವಿರುದ್ಧ ಸುಬ್ರಮಣ್ಯ ಹಾಗೂ ಇತರರು

ಕ್ರಿಮಿನಲ್ ಅಪೀಲುಸಂಖ್ಯೆ: 473/2013, ದಿನಾಂಕ 2 ನೇ ಜುಲೈ, 2019

ತೀರ್ಪು

ನ್ಯಾಯಮೂರ್ತಿ ಶ್ರೀ ಹೆಚ್.ಪಿ. ಸಂದೇಶ್:

ದಿನಾಂಕ 20-12-2012 ರ ಆದೇಶದ ಆದೇಶದ ಪ್ರಕಾರ ಪ್ರಧಾನ ಸತ್ರ ನ್ಯಾಯಾಧೀಶರು, ಚಿಕ್ಕಮಗಳೂರು ಇವರು ಎಸ್.ಸಿ.ಸಂಖ್ಯೆ:59/2011 ರಲ್ಲಿ ಹೊರಡಿಸಿದ ಖುಲಾಸೆಯ ತೀರ್ಪಿನ ವಿರುದ್ಧ ಈ ಅಪೀಲನ್ನು ಸಲ್ಲಿಸಲಾಗಿದೆ.

2. ಪ್ರಕರಣದ ವಾಸ್ತವಿಕ ಸಂಗತಿಯೇನೆಂದರೆ, ಮೃತ ಕಮಲಮ್ಮ ಮಂಜಪ್ಪ ನಾಯ್ಕನ ಎರಡನೇ ಪತ್ನಿಯಾಗಿದ್ದು ಅವನಿಗೆ 2 ನೇ ಸಂಖ್ಯೆಯ ಆಪಾದಿತಳಾದ ಗೌರಿ @ ಗೌರಮ್ಮನು, ಮೊದಲನೇ ಪತ್ನಿಯ ಮುಖಾಂತರ ಜನಿಸಿದ ಮಗಳಾಗಿದ್ದಾಳೆ ಎಂದು ಆರೋಪಮಾಡಿದ್ದು, ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 120 ಬಿ, 302, 379, 201 ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಗಳಿಗಾಗಿ 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರ ವಿರುದ್ಧ ಆರೋಪ ಪಟ್ಟಿಯನ್ನು ಪೊಲೀಸರು ಸಲ್ಲಿಸಿದ್ದಾರೆ.ಕಮಲಮ್ಮನಿಗೆ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸಿ.ಡಬ್ಲ್ಯು ೧ ಹಾಗೂ ಸಿ.ಡಬ್ಲ್ಯುತಿ ಮಕ್ಕಳಿದ್ದಾರೆ.ಸಿ.ಡಬ್ಲ್ಯುನ್ನು ಪಿ.ಡಬ್ಲ್ಯು ಶ ಎಂದು ವಿಚಾರಣೆ ಮಾಡಲಾಗಿದೆ ಹಾಗೂ ಇವರ ಮತ್ತೊಬ್ಬ ಮಗಳನ್ನು ವಿಚಾರಣೆ ಮಾಡಿರುವುದಿಲ್ಲ.ಸದರಿ ಕಮಲಮ್ಮನು ಹೊರಬೈಲು ಗ್ರಾಮದಲ್ಲಿ, ಹೊಸಮನೆಯಲ್ಲಿ 2 ನೇ ಸಂಖ್ಯೆಯ ಆಪಾದಿತಳ ಪಕ್ಕದ ಮನೆಯಲ್ಲಿ ಒಂಟಿಯಾಗಿ ವಾಸಿಸುತ್ತಿದ್ದಳು.2 ನೇ ಸಂಖ್ಯೆಯ ಆಪಾದಿತಳ ಪತಿಯೂ ಕೂಡ ಮರಣ ಹೊಂದಿದ್ದಾನೆ ಹಾಗೂ ಅವಳು ತನ್ನ ಇಬ್ಬರು ಮಕ್ಕಳೊಂದಿಗೆ ವಾಸಿಸುತ್ತಿದ್ದಳು.1 ಹಾಗೂ 2 ನೇ ಸಂಖ್ಯೆಯ ಆಪಾದಿತರು ಅನೈತಿಕ ಸಂಬಂಧವನ್ನು ಹೊಂದಿದ್ದು ಅದಕ್ಕೆ ಮೃತ ಕಮಲಮ್ಮನು ಆಕ್ಷೇಪವೆತ್ತಿ ಅವರನ್ನು ಬೈಯ್ಯುತ್ತಿದ್ದಳು ಹಾಗೂ ಅವರ ದಾರಿಗೆ ಅಡ್ಡವಾಗಿದ್ದಳು ಎಂಬುದು ಪ್ರಾಸಿಕ್ಯೂಷನ್ನ ವಾದ.

3. ಪ್ರಾಸಿಕ್ಯೂಷನ್ನು, ದೋಷಾರೋಪ ಮಾಡುವುದಕ್ಕಾಗಿ, 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರಿಬ್ಬರೂದಿನಾಂಕ: 23-08-2010 ರಂದು ಕಮಲಮ್ಮನನ್ನು ಮುಗಿಸಲು ತಮ್ಮ ಸಂಬಂಧಕ್ಕೆ ಇದ್ದ ಅಡಚಣೆಯನ್ನು ತೊಡೆದುಹಾಕಲು ಒಪ್ಪಿಕೊಂಡಿದ್ದು, ಸಂಚುರೂಪಿಸಿದ್ದಾರೆ ಎಂದು ಆರೋಪಿಸಿದೆ.ಅದೇ ದಿನದಂದು, ರಾತ್ರಿ ಸುಮಾರು 9 ಗಂಟೆಗೆ ಇಬ್ಬರೂ ಮೃತ ಕಮಲಮ್ಮನ ಮನೆಗೆ ಹೋಗಿದ್ದಾರೆ ಹಾಗೂ ದನದ ಷೆಡ್ಡು ಬಳೀ, ಕಮಲಮ್ಮನ ತಲೆ ಹಾಗೂ ಕುತ್ತಿಗೆ ಮೇಲೆ ದೊಣ್ಣೆಗಳಿಂದ ಹೊಡೆದು ಅವಳನ್ನು ಕೊಲೆ ಮಾಡಿದ್ದಾರೆ.ಇದಾದ ನಂತರ, ಮೃತಳಿಗೆ ಸೇರಿದ ಚಿನ್ನದ ಸರ, ಒಂದು ಜೊತೆ ಕಿವಿಯೋಲೆ, ಒಂದು ಚಿನ್ನದ ಉಂಗುರ ಹಾಗೂ ಮೊಬೈಲನ್ನು ಕಳ್ಳತನ ಮಾಡಿರುವರೆಂಬುದೂ ಕೂಡ ಪ್ರಾಸಿಕ್ಯೂಷನ್ನ ವಾದವಾಗಿದೆ.1 ಹಾಗೂ 2 ನೇ ಸಂಖ್ಯೆಯ ಆಪಾದಿತರು 3 ನೇ ಸಂಖ್ಯೆಯ ಆಪಾದಿತರ ನೆರವು ಪಡೆದು ಕೊಲೆಯ ಪುರಾವೆಯನ್ನು ಮರೆಮಾಚುವ ಉದ್ದೇಶದಿಂದ ಸೀರೆಯಿಂದ ಮೃತದೇಹವನ್ನು ಕಟ್ಟಿ ನೀರಿನ ಕಾಲುವೆ ಪಕ್ಕದಲ್ಲಿದ್ದ ದಿನಮಣಿ ಹಾರೆಯ ಸಹಾಯದಿಂದ ಗುಂಡಿಯನ್ನು ತೋಡಿ ಮೃತರ ಮೃತದೇಹವನ್ನು ಹೂತು ಹಾಕಿದ್ದಾರೆ ಎಂಬುದು ಪ್ರಾಸಿಕ್ಯೂಷನ್ ಮುಂದಿನ ವಾದವಾಗಿದೆ.1 ನೇ ಸಂಖ್ಯೆಯ ಆಪಾದಿತನು ಕೊಡೆಯನ್ನು ತೆಗೆದುಕೊಂಡು ಕುಪ್ಪಳ್ಳಿ ಗ್ರಾಮದ ಬಸ್ ನಿಲ್ದಾಣದ ಷೆಲ್ಟರಿನ ಮೇಲೆ ಎಸೆದು, ಚಿನ್ನಾಭರಣಗಳನ್ನು, ರಿಪ್ಪನ್ ಪೇಟೆಯ ಒಡವೆ ಅಂಗಡಿಯಲ್ಲಿ ಮಾರಾಟಮಾಡಿ, ಮೊಬೈಲ್ ಫೋನನ್ನು ಮೀರತ್ಕಲ್ಲು ನಿವಾಸಿಯಾಗಲಿದ್ದ ಅಶೋಕ್ @ ಮೀರನಾಥ್ ಎಂಬೊಬ್ಬರಿಗೆ ಮಾರಾಟ ಮಾಡಿದ್ದಾನೆ ಎಂಬುದು ಪ್ರಾಸಿಕ್ಯೂಷನ್ನ ಮುಂದುವರಿದ ವಾದ,ದಿನಾಂಕ: 24-08-2010 ರಂದು 2 ನೇ ಸಂಖ್ಯೆಯ ಆಪಾದಿತನ ಮಗನು, ಸಿ.ಡಬ್ಲ್ಯು ಯೋಗೀಶ್ಗೆ, ಅವನ

ಅತ್ತೆಯಾದ ಮೃತ ಕಮಲಮ್ಮನುದಿನಾಂಕ: 23.08.2010 ರಿಂದ ಕಾಣಿಸುತ್ತಿಲ್ಲವೆಂದು ಹೇಳಿದ್ದಾನೆ.ಹುಡುಕಿಯಾದ ನಂತರ, ಅವನು ಕೊಪ್ಪ ಪೊಲೀಸು ಠಾಣೆಗೆ ಹೋಗಿ ಕಾಣೆಯಾಗಿರುವ ಬಗ್ಗೆ ದೂರನ್ನು ಸಲ್ಲಿಸಿದ್ದಾನೆ.ಎಂಬುದು ಪ್ರಾಸಿಕ್ಯೂಷನ್ನ ವಾದ.ದಿನಾಂಕ: 09.12.2010 ರಂದು ರಾತ್ರಿ ಸುಮಾರು 9.30 ಗಂಟೆಗೆ 3 ನೇ ಸಂಖ್ಯೆಯ ಆಪಾದಿತನು ಸಿ.ಡಬ್ಲ್ಯುನ್ನು ಭೇಟಿಯಾಗಿ, ಸುಮಾರು ನಾಲ್ಕು ತಿಂಗಳ ಹಿಂದೆ 1 ಹಾಗೂ 2 ನೇ ಸಂಖ್ಯೆಯ ಆಪಾದಿತರು ಬ್ರಾಂದಿಯನ್ನು ನೀಡಿ, ನಿನಗೆ ಸ್ವಲ್ಪ ಕೆಲಸವಿದೆ ಎಂದು ಹೇಳಿ ಅವನನ್ನು ಕರೆದುಕೊಂಡು ಹೋಗಿ, ತಾವು ಮೃತಳ ಕೊಲೆಯನ್ನು ಮಾಡಿದ್ದು ದೇಹವನ್ನು ದನದ ಷೆಡ್ನಲ್ಲಿ ಇಟ್ಟಿದ್ದೇವೆಂದು ಹಾಗೂ ಮೃತದೇಹವನ್ನು ಸಾಗಿಸಲು ಅವನ ಸಹಾಯವನ್ನು ಕೇಳಿದರೆಂದು ತಿಳಿಸಿದ್ದಾನೆ.ಅವನು ಸದರಿ ಕೆಲಸವನ್ನು ಮಾಡಲು ಒಪ್ಪದಿದ್ದಾಗ, ಅವರು, ತನ್ನ ಪ್ರಾಣವನ್ನು ಸಹ ತೆಗೆಯುವುದಾಗಿ ಬೆದರಿಕೆ ಹಾಕಿದ್ದು, ಇದರಿಂದ ಭಯಪಟ್ಟು ತಾನು ಅವರ ಜೊತೆ ಹೋದೆನೆಂದು ಹೇಳಿದ್ದಾನೆ.1 ನೇ ಸಂಖ್ಯೆಯ ಆಪಾದಿತನು ಮೃತ ದೇಹದಿಂದ ಚಿನ್ನಾಭರಣಗಳನ್ನು ತೆಗೆದನೆಂದು ಹಾಗೂ ಎಲ್ಲರೂ ಮೃತದೇಹವನ್ನು ಸಾಗಿಸಿ ಅದನ್ನು ಹೂತು ಹಾಕಿದೆವೆಂದು ತಿಳಿಸಿದ್ದಾನೆ.ಆಗ, ಸಿಡಬ್ಲ್ಯು,ದಿನಾಂಕ: 10.12.2010 ರಂದು ಪೊಲೀಸು ಠಾಣೆಗೆ ಹೋಗಿ ದೂರು ಸಲ್ಲಿಸಿದ್ದಾನೆ.  ಇದಾದ ನಂತರ ಸಿ.ಡಬ್ಲ್ಯು ಶ 42 ನ್ನು, ಆಪಾದಿತನನ್ನು ಬಂಧಿಸಲು ನಿಯೋಜಿಸಲಾಗಿತ್ತು.ತನಿಖೆ ನಡೆಯುವ ಅವಧಿಯಲ್ಲಿ, ಆಪಾದಿತರು ಸ್ವಯಂ ಹೇಳಿಕೆಯ ಆಧಾರದ ಮೇಲೆ ಅವರನ್ನು ಬಂಧಿಸಿದ ನಂತರ ಮಾರಾಟ ಮಾಡಿರುವ ಚಿನ್ನಾಭರಣಗಳನ್ನು ಇತರ ಆರೋಪದ ಸಾಕ್ಷ್ಯಾಧಾರಗಳನ್ನು ವಶಕ್ಕೆ ತೆಗೆದುಕೊಳ್ಳಲಾಯಿತು.1 ಹಾಗೂ 3 ನೇ ಸಂಖ್ಯೆಯ ಆಪಾದಿತರು, ಅವರು ಮೃತದೇಹವನ್ನು ಹೂತಿದ್ದ ಸ್ಥಳವನ್ನು ತೋರಿಸಿದ್ದರು.ಅದನ್ನು ಉಪ-ವಿಭಾಗೀಯ ದಂಡಾಧಿಕಾರಿಯವರ ಸಮ್ಮುಖದಲ್ಲಿ ಅಗೆದು ಹೊರತೆಗೆಯಲಾಯಿತು ಹಾಗೂ ದೇಹವನ್ನು ಪತ್ತೆ ಹಚ್ಚಿ ಬಟ್ಟೆಗಳನ್ನು ಕಂಡು ಹಿಡಿಯಲಾಯಿತು.ಇದಾದ ನಂತರ ಮೃತ ದೇಹವನ್ನು ಕಮಲಮ್ಮನದೆಂದು ಗುರುತಿಸಲಾಯಿತು.ತನಿಖೆಯ ನಂತರ ಪೊಲೀಸರು 1 ಹಾಗೂ 3 ನೇ ಆಪಾದಿತರ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸಿದರು.ಆರೋಪ ಪಟ್ಟಿಯನ್ನು ಸಲ್ಲಿಸಿದ ನಂತರ, ಸಂಜ್ಞೆಯತೆಯನ್ನು ತೆಗೆದುಕೊಳ್ಳಲಾಯಿತು ಹಾಗೂ ವಿಷಯವನ್ನು, ಸತ್ರ ನ್ಯಾಯಾಲಯಕ್ಕೆ ಒಪ್ಪಿಸಲಾಯಿತು ಹಾಗೂ ಮಾನ್ಯ ಸತ್ರ ನ್ಯಾಯಾಧೀಶರು, ಆಪಾದಿತನ ಉಪಸ್ಥಿತಿಯನ್ನು ಖಚಿತಪಡಿಸಿಕೊಂಡು ಮೇಲಿನ ಅಪರಾಧಗಳಿಗಾಗಿ ಆರೋಪಗಳನ್ನು ರೂಪಿಸಿದ ನಂತರ ಹಾಗೂ ಆಪಾದಿತನು, ತನ್ನೊಪ್ಪಿಕೊಳ್ಳದೆ, ಅಧಿವಿಚಾರಣೆಗಾಗಿ ಕ್ಲೇಮು ಮಾಡಿದಾಗ, ಪ್ರಕರಣವನ್ನು ಸಾಕ್ಷ್ಯಕ್ಕಾಗಿ ಮಂಡಿಸಲಾಯಿತು.

4. ಪ್ರಾಸಿಕ್ಯೂಷನ್ನು ಮೊಕದ್ದಮೆಯನ್ನು ರುಜುವಾತುಮಾಡುವ ಸಲುವಾಗಿ ಪ್ರಾ.ಸಾ .1 ರಿಂದ 19 ರವರೆಗಿನ ಸಾಕ್ಷ್ಯಗಳನ್ನು ವಿಚಾರಣೆಗೊಳಪಡಿಸಿ ನಿಶಾನೆ ಪಿ .1 ರಿಂದ 30 ರವರೆಗೆ ಗುರುತುಹಾಕಲಾಯಿತು ಹಾಗೂ ಮುದ್ದೆ ಮಾಲು 1 ರಿಂದ 17 ನ್ನು ಸಹ ಗುರುತು ಹಾಕಲಾಯಿತು.

5. ಪ್ರಾಸಿಕ್ಯೂಷನ್ನ ಸಾಕ್ಷ್ಯವನ್ನು ಮುಕ್ತಾಯಗೊಳಿಸಿದ ನಂತರ, ಆಪಾದಿತ ವ್ಯಕ್ತಿಗಳನ್ನು ದಂಡ ಪಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಮೇರೆಗೆ ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಸಹ ದಾಖಲಿಸಲಾಯಿತು.ಆಪಾದಿತ ವ್ಯಕ್ತಿಗಳು ತಮ್ಮ ವಿರುದ್ಧ ಮಾಡಿದ ದೋಷಾರೋಪದ ಸಾಕ್ಷ್ಯಾಧಾರಗಳನ್ನು ನಿರಾಕರಿಸಿದರು.ಅವರು ಯಾವುದೇ ಪ್ರತಿವಾದವನ್ನು ನಡೆಸುವುದಕ್ಕೆ ಆಯ್ಕೆ ಮಾಡಿಕೊಂಡಿರಲಿಲ್ಲ. ಪ್ರಾಸಿಕ್ಯೂಷನ್ ಹಾಗೂ ಪ್ರತಿವಾದ ಎರಡೂ ಕಡೆಯ ವಾದವನ್ನು ಆಲಿಸಿದ ನಂತರ, ಅಧೀನ ನ್ಯಾಯಾಲಯವು, ಆಪಾದಿತ ವ್ಯಕ್ತಿಗಳನ್ನು ಎಲ್ಲಾ ಅಪರಾಧಗಳಿಂದ ಖುಲಾಸೆಗೊಳಿಸಿತು.ಹೀಗಾಗಿ ರಾಜ್ಯವು ಪ್ರಸ್ತುತ ಅಪೀಲನ್ನು ಹೂಡಿದೆ.

6. ರಾಜ್ಯದ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ತಮ್ಮ ವಾದದಲ್ಲಿ, ಅಧಿವಿಚಾರಣಾ ನ್ಯಾಯಾಲಯವು, ಪ್ರಾಸಿಕ್ಯೂಷನ್ನು ಆಪಾದಿತ ವ್ಯಕ್ತಿಗಳ ವಿರುದ್ಧ ಪ್ರಕರಣವನ್ನು ರುಜುವಾತುಪಡಿಸಲು ವಿಫಲವಾಗಿದೆಯೆನ್ನುವ ನಿರ್ಣಯಕ್ಕೆ ಬಂದಿದ್ದು ಆಪಾದಿತ ವ್ಯಕ್ತಿಗಳನ್ನು ದೋಷಯುಕ್ತವಾಗಿ ಖುಲಾಸೆಗೊಳಿಸಿದೆಯೆಂದು ಬಲವಾಗಿ ವಾದಿಸಿದ್ದಾರೆ.ಎಲ್ಲಾ ಸಾಕ್ಷಿದಾರರು ಪ್ರಾಸಿಕ್ಯೂಷನ್ನ ವಾದವನ್ನು ಬೆಂಬಲಿಸಿದರೂ ಕೂಡ, ಅಧಿವಿಚಾರಣಾ ನ್ಯಾಯಾಲಯವು, ತನ್ನ ಯುಕ್ತ ದೃಷ್ಟಿಯಲ್ಲಿ ಪ್ರಾಸಿಕ್ಯೂಷನ್ನ ಸಾಕ್ಷ್ಯವನ್ನು ಗ್ರಹಿಸುವಲ್ಲಿ ವಿಫಲವಾಗಿದೆಯೆಂದು ಮಾನ್ಯ ಹೆಚ್ಚುವರಿ ರಾಜ್ಯ ಸರ್ಕಾರಿ ಅಭಿಯೋಜಕರು ನಿವೇದಿಸಿರುವರು.2 ನೇ ಸಂಖ್ಯೆಯ ಆಪಾದಿತರು 1 ನೇ ಸಂಖ್ಯೆಯ ಆಪಾದಿತರೊಂದಿಗೆ ಅನೈತಿಕ ಸಂಬಂಧವನ್ನು ಹೊಂದಿದ್ದರು ಎಂದು ಪ್ರಾ.ಸಾ .1 ಹಾಗೂ 7 ನ್ಯಾಯಾಲಯದ ಮುಂದೆ ಹೇಳಿಕೆ ನೀಡಿದ್ದಾರೆ.ಈ

ಸಂಗತಿಯನ್ನು ಮೃತಳು ಹಳ್ಳಿಯಲ್ಲೆಲ್ಲಾ ಪ್ರಚಾರ ಮಾಡಿದ್ದಳು.ಹೀಗಾಗಿ 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರು, ಮೃತಳು ಕೊಲೆಯನ್ನು ಮಾಡಲು ಪ್ರಚೋದಿತರಾಗುತ್ತಿದ್ದರು.ಅಧಿವಿಚಾರಣಾ ನ್ಯಾಯಾಲಯವು, 1 ಹಾಗೂ 3 ನೇ ಆಪಾದಿತರ ಸ್ವಯಂ ಹೇಳಿಕೆಯ ಆಧಾರದ ಮೇಲೆ ಮೃತರ ಮೃತದೇಹವನ್ನು ವಶಪಡಿಸಿಕೊಳ್ಳಲಾಗಿತ್ತು ಎಂಬ ಸಂಗತಿಯನ್ನು ಗಮನಕ್ಕೆ ತೆಗೆದುಕೊಳ್ಳುವಲ್ಲಿ ವಿಫಲವಾಗಿದೆ.ಈ ಸಂಗತಿಯನ್ನು ಪ್ರಾ.ಸಾ .2,3,7,8 ಹಾಗೂ 15 ರ ಸಾಕ್ಷ್ಯಗಳು ಸಮರ್ಥಿಸುತ್ತಿದ್ದು ಇದರಲ್ಲಿ ಈ ಆಪಾದಿತ ವ್ಯಕ್ತಿಗಳು, ಮೃತಳನ್ನು ಕೊಲೆಗೈದ ನಂತರ ಕಾನೂನಿನ ಕೈಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿ ಮೃತದೇಹವನ್ನು ಹೂತುಹಾಕಿ ಸಾಕ್ಷ್ಯವನ್ನು ನಾಶಪಡಿಸುವ ಉದ್ದೇಶ ಹೊಂದಿದ್ದರು ಎಂಬುದನ್ನು ಸ್ಪಷ್ಟವಾಗಿ ರುಜುವಾತುಪಡಿಸುತ್ತವೆ.ಇದನ್ನು ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಯುಕ್ತವಾಗಿ ವಿವೇಚಿಸಿರುವುದಿಲ್ಲ.ಮಾನ್ಯ ವಕೀಲರು ತಮ್ಮ ವಾದದಲ್ಲಿ, ಸದರಿ ಸಂಗತಿ ಜೊತೆಗೆ 1 ನೇ ಸಂಖ್ಯೆಯ ಆಪಾದಿತನು, ಕೊಲೆಯನ್ನು ಮಾಡಿದ ನಂತರ ಮೃತರಿಗೆ ಸೇರಿದ ಮೊಬೈಲನ್ನು ತೆಗೆದುಕೊಂಡು ಅದನ್ನು ಪ್ರಾ.ಸಾ .10 ಕ್ಕೆ ಮಾರಾಟಮಾಡಿರುವರೆಂದು ನಿವೇದಿಸಿದ್ದರು.ಅಷ್ಟೇ ಅಲ್ಲದೆ, 1 ಹಾಗೂ 3 ನೇ ಆಪಾದಿತರ ಸೂಚನೆ ಮೇರೆಗೆ ಪೊಲೀಸರು ದೊಣ್ಣೆಯನ್ನು ಹಾಗೂ ಗುದ್ದಲಿಯನ್ನು ವಶಪಡಿಸಿಕೊಂಡಿದ್ದರು ಎಂಬ ಸಂಗತಿಯನ್ನು ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ವಿವೇಚಿಸುವಲ್ಲಿ ವಿಫಲರಾಗಿದ್ದಾರೆ.ಪ್ರಾ.ಸಾ .6 ರ ಸಾಕ್ಷ್ಯದಲ್ಲಿ ಸದರಿ ಸಂಗತಿಯು ಸಹ ಸಾಬೀತಾಗುತ್ತದೆ.ಆಪಾದಿತ ವ್ಯಕ್ತಿಗಳ ಸೂಚನೆಯ ಮೇರೆಗೆ ಪೊಲೀಸರು, ಪ್ರಾ.ಸಾ .4 ಹಾಗೂ 5 ರ ಸಮ್ಮುಖದಲ್ಲಿ ಆಪಾದಿತರ ಬಟ್ಟೆಗಳನ್ನು ವಶಪಡಿಸಿಕೊಂಡಿದ್ದರು ಎಂಬ ಸಂಗತಿಯನ್ನು ವಿವೇಚಿಸುವಲ್ಲಿಯೂ ಕೂಡ ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ವಿಫಲರಾಗಿದ್ದಾರೆ.ಸಾಕ್ಷ್ಯವನ್ನು ವಿವೇಚಿಸುವಾಗ ಅಧಿವಿಚಾರಣಾ ನ್ಯಾಯಾಲಯವು ಇದನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ.

7. ಮಾನ್ಯ ವಕೀಲರ ಮತ್ತೊಂದು ವಾದವೇನೆಂದರೆ, 1 ನೇ ಸಂಖ್ಯೆಯ ಆಪಾದಿತನ ಸ್ವಯಂ ಹೇಳಿಕೆಯ ಆಧಾರದ ಮೇಲೆ ಪೊಲೀಸರು ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ ಹಾಗೂ ಪ್ರಾ.ಸಾ .2 ಹಾಗೂ 9 ರ ಸಾಕ್ಷ್ಯಗಳೂ ಕೂಡ ಸದರಿ ಸಂಗತಿಯನ್ನು ಪುಷ್ಟೀಕರಿಸುತ್ತದೆ ಎಂಬುದಾಗಿದೆ.ಆ ವಸ್ತುಗಳನ್ನು ದೂರುದಾರನು ಸಹ ಗುರುತಿಸಿದ್ದಾನೆ.ಆ ಚಿನ್ನಾಭರಣಗಳು ಮೃತಳಿಗೆ ಸೇರಿದಂಥವೆಂದು ಸಹ ಪ್ರಾ.ಸಾ .1 ಗುರುತಿಸಿದ್ದಾರೆ.ಪ್ರಾ.ಸಾ .1 ಮೃತಳ ಮಗಳಾಗಿದ್ದಾಳೆ.ಈ ಎಲ್ಲಾ ಸನ್ನಿವೇಶಗಳು ಹಾಗೂ ಸಾಕ್ಷ್ಯವು ಪ್ರಾಸಿಕ್ಯೂಷನ್ನ ಪರವಾಗಿದ್ದರೂ ಕೂಡ ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ಪ್ರಕರಣವು ಸಾಂದರ್ಭಿಕ ಸಾಕ್ಷ್ಯದ ಆಧಾರದ ಮೇಲೆ ನಿಂತಿದೆ ಹಾಗೂ ಸನ್ನಿವೇಶಗಳ ಸರಣಿಯನ್ನು ರುಜುವಾತು ಪಡಿಸಲಾಗಿಲ್ಲ ಎಂಬ ಕಾರಣದ ಮೇಲೆ ಆಪಾದಿತ ವ್ಯಕ್ತಿಗಳನ್ನು ಖುಲಾಸೆಗೊಳಿಸಿ ದೋಷವೆಸಗಿದ್ದಾರೆ.ಹೀಗಾಗಿ, ಆಪಾದಿತ ವ್ಯಕ್ತಿಗಳ ಖುಲಾಸೆಯ ತೀರ್ಪು ಯುಕ್ತವಾಗಿರುವುದಿಲ್ಲ ಹಾಗೂ ಇದರಲ್ಲಿ ಹಸ್ತಕ್ಷೇಪ ಮಾಡಬೇಕಾಗುತ್ತದೆ ಹಾಗೂ ಇದನ್ನು ಮರುವಿವೇಚಿಸಬೇಕಾಗುತ್ತದೆ ಹಾಗೂ ಆಪಾದಿತ ವ್ಯಕ್ತಿಗಳನ್ನು, ಅವರ ವಿರುದ್ಧ ವಿಧಿಸಲಾದ ಆರೋಪಗಳಿಗಾಗಿ ಅಪರಾಧನಿರ್ಣಯ ಮಾಡ ಬೇಕಾಗುತ್ತದೆಯೆಂದು ವಾದಿಸಿದ್ದಾರೆ.

8. ಇದಕ್ಕೆ ವಿರುದ್ಧವಾಗಿ, ಎದುರುದಾರ ಆಪಾದಿತನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ತಮ್ಮ ವಾದದಲ್ಲಿ, ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯವನ್ನು ವಿವೇಚಿಸುವಾಗ ಪ್ರತಿಯೊಂದು ಸನ್ನಿವೇಶಕ್ಕೆ ಸಂಬಂಧಿಸಿದಂತೆ ವಿವರವಾಗಿ ಚರ್ಚಿಸಿದ್ದಾರೆ ಎಂದು ಬಲವಾಗಿ ವಾದಿಸಿದ್ದಾರೆ.ಪ್ರಕರಣವು ಸಾಂದರ್ಭಿಕ ಸಾಕ್ಷ್ಯದ ಮೇಲೆ ನಿಂತಿದ್ದು, ಪ್ರಾಸಿಕ್ಯೂಷನ್ನ ವಾದವನ್ನು ಸಂದರ್ಭಗಳಾವುವೂ ಸಮರ್ಥಿಸದಿರುವುದರಿಂದ, ಪ್ರಾಸಿಕ್ಯೂಷನ್ ಆಪಾದಿತ ವ್ಯಕ್ತಿಗಳ ವಿರುದ್ಧ ಪ್ರಕರಣವನ್ನು ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲಗೊಂಡಿದೆಯೆಂದು ಅಧಿವಿಚಾರಣಾ ನ್ಯಾಯಾಲಯವು ತೀರ್ಮಾನಿಸಿ ಆಪಾದಿತ ವ್ಯಕ್ತಿಗಳನ್ನು ಖುಲಾಸೆಗೊಳಿಸಿದೆ.ಮಾನ್ಯ ವಕೀಲರು, ಪ್ರತಿಯೊಂದೂ ಸನ್ನಿವೇಶಗಳ ನಡುವೆ ಸಂಬಂಧವಿಲ್ಲವೆಂದು ಹಾಗೂ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿರುವ ಸಾಕ್ಷ್ಯವು ಕೇವಲ ವದಂತಿ ಸ್ವರೂಪದ್ದಾಗಿದ್ದು, ಪ್ರಾ.ಸಾ .7 ರೊಟ್ಟಿಗೆ 3 ನೇ ಸಂಖ್ಯೆಯ ಆಪಾದಿತನು ಮಾಡಿದ ಹೆಚ್ಚಿನ ನ್ಯಾಯಿಕ ತನ್ನೊಪ್ಪಿಗೆಗೆಯನ್ನು ಹೊರಡಿಸುವುದಕ್ಕೆ ಸಂಬಂಧಿಸಿದಂತೆ ಪ್ರಾ.ಸಾ .7 ರ ಸಾಕ್ಷ್ಯದ ಬಾಯಿಯಿಂದ ನ್ಯಾಯಾಲಯವು ಸತ್ಯವನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ ಎಂದು ನಿವೇದಿಸಿದ್ದಾರೆ.ಅಧಿವಿಚಾರಣಾ ನ್ಯಾಯಾಲಯವ, ಪ್ರಾಸಿಕ್ಯೂಷನ್ನ ವಿವರವಾದ ಸಾಕ್ಷ್ಯಕ್ಕೆ ಆತಂಕಕಾರಿ ಪರಿಗಣನೆಯನ್ನು ನೀಡಿದ್ದು, ಪ್ರಾಸಿಕ್ಯೂಷನ್ನು ಪ್ರಕರಣವನ್ನು ರುಜುವಾತುಪಡಿಸಲು ವಿಫಲಗೊಂಡಿದೆಯೆಂದು ತನ್ನ ಅಭಿಪ್ರಾಯವನ್ನು ಸರಿಯಾಗಿಯೇ ರೂಪಿಸಿದೆ.ಹೀಗಾಗಿ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯಗಳಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಆಧಾರಗಳಿರುವುದಿಲ್ಲ ಹಾಗೂ

ಪ್ರಾಸಿಕ್ಯೂಷನ್ನು ಆಪಾದಿತ ವ್ಯಕ್ತಿಗಳ ವಿರುದ್ಧ ವಾದವನ್ನು ರುಜುವಾತುಪಡಿಸಿದೆ ಎಂಬ ಮತ್ತೊಂದು ನಿರ್ಣಯಕ್ಕೆ ಬರಲು ಯಾವುದೇ ಸಾಕ್ಷ್ಯಾಧಾರವನ್ನು ಹಾಜರುಪಡಿಸಿಲ್ಲ.

9. ರಾಜ್ಯದ ಹಾಗೂ ಆಪಾದಿತ ವ್ಯಕ್ತಿಗಳ ಪರವಾಗಿ ಹಾಜರಾಗಿರುವ ಎರಡೂ ಕಡೆಯ ಮಾನ್ಯ ವಕೀಲರ ವಾದ ಪ್ರತಿವಾದಗಳನ್ನು ಆಲಿಸಿದ ನಂತರ ನಮ್ಮ ಪರಿಗಣನೆಗಾಗಿ ಮುಂದಿನ ಅಂಶಗಳು ಉದ್ಭವಿಸಿವೆ:

1) ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 120 ಬಿ, 302, 379 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಗಳನ್ನು ಎಸಗಿದ್ದಕ್ಕಾಗಿ 1 ಹಾಗೂ 2 ನೇ ಆಪಾದಿತರನ್ನು ಖುಲಾಸೆಗೊಳಿಸಿ ಅಧಿವಿಚಾರಣಾ ನ್ಯಾಯಾಲಯವು ದೋಷವೆಸಗಿದೆಯೇ?

2) ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 201 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಗಳಿಗಾಗಿ ಆಪಾದಿತ ವ್ಯಕ್ತಿಗಳನ್ನು ಖುಲಾಸೆ ಗೊಳಿಸುವಲ್ಲಿ ಅಧಿ ವಿಚಾರಣಾ ನ್ಯಾಯಾಲಯವು ದೋಷವೆಸಗಿದೆಯೇ?

ವಿವಾದಾಂಶ ಸಂಖ್ಯೆಗಳು 1 ಮತ್ತು 2:

ಆಪಾದನೆಗಳು ಪರಸ್ಪರ ಸಂಬಂಧ ಹೊಂದಿರುವುದರಿಂದ ಎರಡೂ ಅಂಶಗಳನ್ನು ಒಟ್ಟಿಗೆ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.ಪ್ರಾಸಿಕ್ಯೂಷನ್ನ ವಾದ ಏನೆಂದರೆ 1 ನೇ ಹಾಗೂ 2 ನೇ ಆಪಾದಿತರು, ಒಬ್ಬರಿಗೊಬ್ಬರು ಪಿತೂರಿ ನಡೆಸಿ ಕೊಲೆ ಮಾಡಿದ್ದಾರೆ ಎಂಬುದಾಗಿದೆ, ಇದಾದ ನಂತರ ಅವರು 3 ನೇ ಸಂಖ್ಯೆಯ ಆಪಾದಿತನ ಸಹಾಯ ಪಡೆದುಕೊಂಡು ಸಾಕ್ಷ್ಯವನ್ನು ಸಾಕ್ಷ್ಯವನ್ನು ನಾಶಪಡಿಸಿರುತ್ತಾರೆ ಎಂಬುದಾಗಿದೆ.

10. ಮಾನ್ಯ ಇಬ್ಬರೂ ವಕೀಲರ ವಾದವನ್ನು ಆಲಿಸಿದ ನಂತರ, ನಾವು, ನ್ಯಾಯಾಲಯದ ಮುಂದೆ ಲಭ್ಯವಿರುವ ಮೌಖಿಕ ಹಾಗೂ ದಸ್ತಾವೇಜಿಯ ಸಾಕ್ಷ್ಯಗಳೆರಡನ್ನೂ ಪರಿಗಣಿಸಬೇಕಾಗುತ್ತದೆ ಹಾಗೂ ಈ ನ್ಯಾಯಾಲಯವು ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯವನ್ನು ಮರುವಿವೇಚಿಸಬೇಕಾಗುತ್ತದೆ.ಈ ಆಪಾದಿತ ವ್ಯಕ್ತಿಗಳು ಕಮಲಮ್ಮನ ಕೊಲೆಯನ್ನು ಮಾಡಿ, ಆನಂತರ ಶವವನ್ನು ನಾಶಪಡಿಸಿದ್ದಾರೆಯೇ ಎಂಬ ನಿರ್ಣಯಕ್ಕೆ ಬರುವ ಸಲುವಾಗಿ ಪ್ರಾಸಿಕ್ಯೂಷನ್ನು ಪ್ರಾ.ಸಾ .1 ರಿಂದ 19 ರವರೆಗಿನ ಸಾಕ್ಷ್ಯವನ್ನು ಆಧರಿಸಿದೆ.ಅವುಗಳ ಪೈಕಿ ಪ್ರಾ.ಸಾ .1 ಮೃತಳ ಮಗಳಾಗಿದ್ದಾಳೆ.ಪ್ರಾ.ಸಾ .2 ಮಹಜರು ಸಾಕ್ಷಿದಾರರಾಗಿದ್ದಾರೆ.ಮೃತ ದೇಹವನ್ನು ಹುಡುಕುವ ಸಂಬಂಧದಲ್ಲಿ ನೆಲ ಅಗೆದು ಶರೀರವನ್ನು ತೆಗೆಯುವ ಸಮಯದಲ್ಲಿ ಪ್ರಾ.ಸಾ .3 ಹಾಜರಿದ್ದರು.ನಿಶಾನೆ ಪಿ .5 ರ ಪ್ರಕಾರ 3 ನೇ ಸಂಖ್ಯೆಯ ಆಪಾದಿತರ ಬಟ್ಟೆಗಳನ್ನು ವಶಪಡಿಸಿಕೊಳ್ಳುವ ಸಂಬಂಧದಲ್ಲಿ ಪಿ.ಡಬ್ಲ್ಯು -5 ಮಹಜರು ಸಾಕ್ಷಿದಾರರಾಗಿದ್ದಾರೆ.ಪ್ರಾ.ಸಾ.ಮತ್ತೊಬ್ಬ ಮಹಜರು ಸಾಕ್ಷಿದಾರರಾಗಿದ್ದು, ಇವರು ನಿಶಾನೆ ಪಿ .6 ರ ಪ್ರಕಾರ ಮಹಜರನ್ನು ಬರೆಯುವ ಮುಖಾಂತರ ಪ್ಯಾಂಟು ಹಾಗೂ ಷರ್ಟನ್ನು ವಶಪಡಿಸಿಕೊಳ್ಳುವ ಸಂಬಂಧದಲ್ಲಿ, ಕಮಲಮ್ಮನ ಮನೆಯ ಬಳಿ 1 ನೇ ಆಪಾದಿತನನ್ನು ಕರೆದೊಯ್ಯಲಾಯಿತೆಂದು ಹೇಳಿದ್ದಾರೆ.1 ನೇ ಸಂಖ್ಯೆಯ ಆಪಾದಿತನು ಪೊದೆಯಿಂದ ದೊಣ್ಣೆಯನ್ನು ತೆಗೆದು, ಅದನ್ನು ಪೊಲೀಸರ ಮುಂದೆ ಹಾಜರುಪಡಿಸಿರುವನೆಂದು ಹಾಗೂ ನಿಶಾನೆ ಪಿ .8 ರ ಪ್ರಕಾರ ಮಹಜರನ್ನು ಬರೆಯಲಾಯಿತೆಂದು ಪ್ರಾ.ಸಾ .6 ಹೇಳಿದ್ದಾರೆ.ಮೃತರ ದೇಹವನ್ನು ಹೂಳಿರುವ ಬಗ್ಗೆ ಬಹಿರಂಗಪಡಿಸಿರುವ 3 ನೇ ಸಂಖ್ಯೆಯ ಆಪಾದಿತನಿಗೆ ೧ ಸಂಬಂಧಿಸಿದಂತೆ ಪ್ರಾ.ಸಾ .7 ಮಾತನಾಡಿರುತ್ತಾರೆ ಹಾಗೂ ಅವನು ಹೆಚ್ಚಿನ ನ್ಯಾಯಿಕ ತಪ್ಪೊಪ್ಪಿಗೆಯನ್ನು ಮಾಡಿಕೊಂಡಿದ್ದಾನೆ.ಪ್ರಾ.ಸಾ .8 ಮೃತದೇಹವನ್ನು ಅಗೆದು ತೆಗೆದುದಕ್ಕೆ ಹಾಗೂ ಮೃತರ ಮೃತದೇಹವನ್ನು ಗುರುತಿಸಿದ್ದ ಸಾಕ್ಷಿದಾರನಾಗಿದ್ದಾನೆ.ಪ್ರಾ.ಸಾ .9 ಆಭರಣ ವ್ಯಾಪಾರಿಯಾಗಿದ್ದು, 1 ನೇ ಸಂಖ್ಯೆಯ ಆಪಾದಿತನು, ಮೃತರಿಗೆ ಸೇರಿದ ಒಡವೆಗಳನ್ನು ಮಾರಾಟ ಮಾಡಿದ್ದ ಬಗ್ಗೆ ಹೇಳಿಕೆ ನೀಡಿದ್ದಾನೆ.ಪ್ರಾ.ಸಾ .10, ಮೃತರ ಮೊಬೈಲನ್ನು ವಶಪಡಿಸಿಕೊಂಡು ಮಹಜರು ಮಾಡಿದುದಕ್ಕೆ ಸಾಕ್ಷಿದಾರರಾಗಿದ್ದಾರೆ.ಪ್ರಾ.ಸಾ .11, ಮರಣೋತ್ತರ ಶವ ಪರೀಕ್ಷೆ ನಡೆಸಿರುವ ವೈದ್ಯರಾಗಿದ್ದು, ಅವರು ಇದು ಹತ್ಯೆಯಿಂದಾದ ಮರಣ ಎಂದು ಹೇಳಿಕೆ ನೀಡಿದ್ದಾರೆ.ಪ್ರಾ.ಸಾ .12, ನಿಶಾನೆ ಪಿ .19 ರ ಪ್ರಕಾರ ಮೃತ ಕಮಲಮ್ಮನ ತಲೆ ಬುರುಡೆ, ತೊಡೆಯೆಲುಬು, ಸೊಂಟದ ಮೂಳೆ, ಉಗುರುಗಳು, ಕೂದಲುಗಳು, ಹೂತಿದ್ದ ಮಣ್ಣು ಹಾಗೂ ಬಟ್ಟೆಗಳನ್ನು ವಶಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಮಹಜರು ಸಾಕ್ಷಿದಾರರಾಗಿದ್ದಾರೆ.ಪ್ರಾ.ಸಾ .13 ಕಿರಿಯ ಅಭಿಯಂತರರಾಗಿದ್ದು ಇವರು ಸ್ಥಳ ನಕ್ಷೆಯನ್ನು ಬರೆದಿದ್ದಾರೆ.ಪ್ರಾ.ಸಾ .14 ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಓ) ಆಗಿದ್ದು, ಇವರು ಮೃತ ಕಮಲಮ್ಮನ ಸ್ವತ್ತು ಸಂಕ್ಷಿಪ್ತ ವಿವರವನ್ನು ನೀಡಿದ್ದಾರೆ.ಪ್ರಾ.ಸಾ.15

ಉಪವಿಭಾಗಾಧಿಕಾರಿಯಾಗಿದ್ದು, ಇವರ ಸಮ್ಮುಖದಲ್ಲಿ ದೇಹವನ್ನು ಅಗೆದು ಹೊರತೆಗೆಯಲಾಯಿತು ಹಾಗೂ ಮೃತ ದೇಹವನ್ನು ಅಗೆದು ತೆಗೆದ ದೃಶ್ಯವನ್ನು ವಿಡಿಯೋಗ್ರಾಫ್ ಮಾಡಲಾಗಿದೆ.ಪ್ರಾ.ಸಾ .16 ಮೊಬೈಲ್ ಫೋನನ್ನು ಖರೀದಿದಾರರಾಗಿದ್ದಾರೆ.ಪ್ರಾ.ಸಾ .17 ರಿಂದ ಪ್ರಾ.ಸಾ .19 ತನಿಖಾಧಿಕಾರಿಗಳಾಗಿದ್ದು, ಪ್ರಕರಣವನ್ನು ದಾಖಲಿಸಿ ತನಿಖೆಯನ್ನು ನಡೆಸಿದ್ದಾರೆ.ಆರೋಪಿಗಳು, ತಮ್ಮ ವಿರುದ್ಧ ಆರೋಪಿಸಲಾದ ಅಪರಾಧಗಳನ್ನು ಮಾಡಿದ್ದಾರೆಯೇ ಎಂಬ ನಿರ್ಣಯಕ್ಕೆ ಬರುವ ಸಲುವಾಗಿ ಮೇಲಿನ ಸಾಕ್ಷಿದಾರರ ಸಾಕ್ಷ್ಯವು ನ್ಯಾಯಾಲಯಕ್ಕೆ ವಿಶ್ವಾಸವನ್ನು ಮೂಡಿಸುತ್ತದೆಯೇ ಎಂಬುದನ್ನು ಈಗ ಮರುವಿವೇಚಿಸೋಣ.

11. ಪ್ರಾಸಿಕ್ಯೂಷನ್ನ ವಾದವೇನೆಂದರೆ, ಮೃತಳು, ಅವರ ಅನೈತಿಕ ಸಂಬಂಧಕ್ಕೆ ಅಡ್ಡವಾಗಿದ್ದು ಇದನ್ನು ಊರ ತುಂಬೆಲ್ಲಾ ಪ್ರಚುರಪಡಿಸಿದ್ದರಿಂದ ಅವರು ಮೃತ ಶ್ರೀಮತಿ ಕಮಲಮ್ಮನ ಕೊಲೆ ಮಾಡಿದ್ದಾರೆ ಎಂಬುದಾಗಿದೆ.ಅಷ್ಟೇ ಅಲ್ಲದೆ, ಕಮಲಮ್ಮನನ್ನು ಕೊಲೆಮಾಡಿದ ನಂತರ 1 ನೇ ಹಾಗೂ 2 ನೇ ಆಪಾದಿತರು ಮೃತರನ್ನು ಹೂಳಲು 3 ನೇ ಆಪಾದಿತರ ನೆರವನ್ನು ಪಡೆದುಕೊಂಡಿದ್ದಾರೆ ಎಂದು ಪ್ರಾಸಿಕ್ಯೂಷನ್ ವಾದಿಸಿದ್ದಾರೆ.3 ನೇ ಸಂಖ್ಯೆಯ ಆಪಾದಿತನು ನಿರಾಕರಿಸಿದಾಗ, ಅವರು ಗಂಭೀರ ಪರಿಣಾಮಗಳಾಗುತ್ತವೆಂದು ಅವನನ್ನು ಹೆದರಿಸಿದ್ದಾರೆ.ಹೀಗಾಗಿ, ಭಯಭೀತನಾದ 3 ನೇ ಸಂಖ್ಯೆಯ ಆಪಾದಿತನು, ಮೃತ ದೇಹವನ್ನು ಸಾಗಿಸುವಲ್ಲಿ ಆಪಾದಿತರಿಬ್ಬರಿಗೂ ನೆರವಾಗಿದ್ದು, ಆಮೂಲಕ ಅವನು ಭಾರತ ದಂಡ ಸಂಹಿತೆಯ 201 ನೇ ಪ್ರಕರಣದ ಮೇರೆಗೆ ಅಪರಾಧವೆಸಗಿದ್ದಾನೆ.

12. ಸಾಕ್ಷ್ಯವನ್ನು ವಿಶ್ಲೇಷಿಸುವ ಮೊದಲು, ಶ್ರೀಮತಿ ಕಮಲಮ್ಮನ ಸಾವು ಹತ್ಯೆಯಿಂದಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಮೊದಲನೆಯದಾಗಿ ನಾವು ಕಂಡುಕೊಳ್ಳಲು ಇಚ್ಛಿಸುತ್ತೇವೆ.ವಿಚಾರಣಾ ನ್ಯಾಯಾಲಯವು, ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ, ಶ್ರೀಮತಿ ಕಮಲಮ್ಮನ ಸಾವು ಹತ್ಯೆಯಾಗಿದೆ ಎಂಬ ನಿರ್ಣಯಕ್ಕೆ ಬಂದಿರುತ್ತದೆ.ವಿಚಾರಣಾ ನ್ಯಾಯಾಲಯದ ತಾರ್ಕಿಕ ಪ್ರತಿಪಾದನೆಗಳನ್ನು ವಿವಾದಾಂಶ ಸಂ .1 ಕ್ಕೆ ಉತ್ತರವನ್ನು ನೀಡುವಾಗ ತೀರ್ಪಿನ 29 ನೇ ಸಂಖ್ಯೆಯ ಕಂಡಿಕೆಯಲ್ಲಿ ನೀಡಲಾಗಿದೆ.ವಿಚಾರಣಾ ನ್ಯಾಯಾಲಯವು, ಹೊರಬೈಲು ಗ್ರಾಮದ ಸರ್ವೆ ಸಂ. 121 ರಿಂದ ಹೆಣ್ಣಿನ ದೇಹವನ್ನು ಅಗೆದು ತೆಗೆಯುವುದಕ್ಕೆ ಸಂಬಂಧಿಸಿದಂತೆ ಪ್ರಾ.ಸಾ .1, 2, 7 ರ ಸಾಕ್ಷ್ಯವನ್ನು ಸಹ ಪರಿಗಣಿಸಿದೆ.ದೇಹವನ್ನು ಅಗೆದು ತೆಗೆಯುವಷ್ಟರಮಟ್ಟಿಗೆ, ಯಾವುದೇ ವಿವಾದವಿರುವುದಿಲ್ಲ ಹಾಗೂ ವಿಚಾರಣೆ ಮಾಡಲಾಗಿರುವ ಸಾಕ್ಷಿದಾರರೂ ಕೂಡ ಪ್ರಧಾನವಾಗಿ, ದೇಹವನ್ನು ಅಗೆದು ತೆಗೆದಿದ್ದು ಅದು ಮೃತ ಕಮಲಮ್ಮನದ್ದೆಂದು ಗುರುತಿಸಲಾಗಿತ್ತೆಂದು ಸ್ಪಷ್ಟವಾಗಿ ಹೇಳಿದ್ದಾರೆ.ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರನ್ನು ಪ್ರಾ.ಸಾ .11 ಎಂದು ವಿಚಾರಣೆ ನಡೆಸಲಾಗಿದೆ ಹಾಗೂ ಇವರ ಸಾಕ್ಷ್ಯವು ಮೇಲಿನ ಸಾಕ್ಷಿದಾರರ ಸಾಕ್ಷ್ಯಕ್ಕೆ ಪುಷ್ಟಿ ನೀಡುತ್ತವೆ ಹಾಗೂ ದೊಣ್ಣೆಯಿಂದ ಹೊಡೆದದ್ದರಿಂದ ಸಾವು ಸಂಭವಿಸಿದೆ ಎಂದು ಹೇಳಲಾಗಿದೆ.ನಡೆಸಲಾದ ಡಿಎನ್‌ಎ ಪರೀಕ್ಷೆ ಕೂಡ ಸಕಾರಾತ್ಮಕ ಫಲಿತಾಂಶವನ್ನು ನೀಡಿದ್ದು, ಸಾಕ್ಷಿದಾರರ ಪಾಟೀ ಸವಾಲಿನಲ್ಲೂ ಕೂಡ, ಇದು ಶ್ರೀಮತಿ ಕಮಲಮ್ಮನಿಗೆ ಸೇರಿಲ್ಲ ಎಂಬುದರ ಬಗ್ಗೆ ಯಾವುದೇ ವಿವಾದವಿಲ್ಲ ಎಂಬುದನ್ನು ತಿಳಿಸುತ್ತದೆ.ಪ್ರಾ.ಸಾ. 1 9, 2 19, 7, 8 ಹಾಗೂ 11 ರ ಸುಸಂಗತ ಸಾಕ್ಷ್ಯವನ್ನು ಪರಿಗಣಿಸಿ ಹಾಗೂ ಪ್ರಾ.ಸಾ .15-ಉಪ ವಿಭಾಗಾಧಿಕಾರಿಯವರ ಸಮ್ಮುಖದಲ್ಲಿ ಶರೀರವನ್ನು ಅಗೆದು ತೆಗೆದಿರುವ ಪ್ರಾ.ಸಾ .3 ರ ಸಾಕ್ಷ್ಯವನ್ನು ಹಾಗೂ ಪ್ರಾ.ಸಾ .11 ರ ಸಾಕ್ಷ್ಯವನ್ನು ಸಹ ಪರಿಗಣಿಸಿ, ಶ್ರೀಮತಿ ಕಮಲಮ್ಮನ ಸಾವು ಹತ್ಯೆಯಿಂದಾಗಿದೆ ಎನ್ನುವ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವನ್ನು ನಾವು ದೃಢೀಕರಿಸುತ್ತೇವೆ.

13. ವಿಚಾರಣಾ ನ್ಯಾಯಾಲಯವು, ಪ್ರಾಸಿಕ್ಯೂಷನ್ನ ವಾದವನ್ನು ಪರಿಗಣಿಸುವಾಗ ಹಾಗೂ 2 ರಿಂದ 5 ನೇ ಸಂಖ್ಯೆಯ ವಿವಾದಾಂಶಕ್ಕೆ ಉತ್ತರಿಸುವಾಗ, ಪ್ರಾಸಿಕ್ಯೂಷನ್ನ ಸಂಪೂರ್ಣ ವಾದವು ಸಾಂದರ್ಭಿಕ ಸಾಕ್ಷ್ಯದ ಮೇಲೆ ಅವಲಂಬಿತವಾಗಿರುವುದರಿಂದ ಹಾಗೂ ಸಾಂದರ್ಭಿಕ ಸಾಕ್ಷ್ಯವನ್ನು ಮರುವಿವೇಚಿಸುವಾಗ ಪ್ರಾಸಿಕ್ಯೂಷನ್ನು, ಎಲ್ಲಾ ಘಟನೆಗಳ ಸರಣಿಯನ್ನು ರುಜುವಾತುಪಡಿಸಲು ವಿಫಲವಾಗಿದೆಯೆನ್ನುವ ನಿರ್ಣಯಕ್ಕೆ ಬಂದಿದ್ದು, ಹಾಗಾಗಿ ಇದನ್ನು ನಾವು ಮರು-ವಿವೇಚಿಸಬೇಕಾಗುತ್ತದೆ. ಪ್ರಾಸಿಕ್ಯೂಷನ್ನ ವಾದ ಏನೆಂದರೆ, ಮೃತಳು 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರ ಅನೈತಿಕ ಸಂಬಂಧಕ್ಕೆ ಅಡ್ಡಗಾಲಾಗಿದ್ದರಿಂದ ಅವಳನ್ನು ಮುಗಿಸಲು ಪರಸ್ಪರ ಪಿತೂರಿ ನಡೆಸಿದರು ಎಂಬುದಾಗಿದೆ.ಅನೈತಿಕ ಸಂಬಂಧವನ್ನು ರುಜುವಾತುಪಡಿಸಲು ಹಾಗೂ ಅಪರಾಧವನ್ನು ಮಾಡುವುದಕ್ಕೆ ಆದ ಪ್ರೇರೇಪಣೆಯನ್ನು ರುಜುವಾತುಪಡಿಸಲು ಪ್ರಾಸಿಕ್ಯೂಷನ್ನು ಮುಖ್ಯವಾಗಿ ಮೃತಳ ಮಗಳಾಗಿರುವ ಪ್ರಾ.ಸಾ .1 ರ ಸಾಕ್ಷ್ಯವನ್ನು ಅವಲಂಬಿಸಿದ್ದಾರೆ.ಪ್ರಾ.ಸಾ .1, ತನ್ನ ಸಾಕ್ಷ್ಯದಲ್ಲಿ, 2 ನೇ ಸಂಖ್ಯೆಯ ಆಪಾದಿತಳು ಮೃತಳ ಮನೆಯ ಪಕ್ಕದಲ್ಲಿ ವಾಸಿಸುತ್ತಿದ್ದಳು ಹಾಗೂ ತನ್ನ ತಾಯಿಗೆ ಇಬ್ಬರು

ಹೆಣ್ಣುಮಕ್ಕಳಿದ್ದು, ಅವರಿಗೆ ಈಗಾಗಲೇ ವಿವಾಹವಾಗಿದ್ದು ಅವರು ಪ್ರತ್ಯೇಕವಾಗಿ ವಾಸಿಸುತ್ತಿದ್ದರೆಂದು ತಿಳಿಸಿದ್ದಾಳೆ.2 ನೇ ಸಂಖ್ಯೆಯ ಆಪಾದಿತಳು ತನ್ನ ಇಬ್ಬರು ಮಕ್ಕಳೊಂದಿಗೆ ವಾಸಿಸುತ್ತಿದ್ದು, ಅವಳ ಪತಿಯು ತೀರಿಕೊಂಡಿದ್ದರು ಎಂದು ತಿಳಿಸಿದ್ದಾಳೆ.ಪ್ರಾ.ಸಾ.!ತನ್ನ ಸಾಕ್ಷ್ಯದಲ್ಲಿ ತನ್ನ ತಾಯಿಯು, 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರು ಅನೈತಿಕ ಸಂಬಂಧವನ್ನು ಹೊಂದಿದ್ದರೆಂದು, ಇದಕ್ಕಾಗಿ ಅವಳ ತಾಯಿಯು ಅವರನ್ನು ಯಾವಾಗಲೂ ಬೈಯ್ಯುತ್ತಿದ್ದಳೆಂದು ತಿಳಿಸಿದ್ದಾಳೆ.ಪಾಟೀ-ಸವಾಲಿನಲ್ಲಿ, ಪ್ರಾ.ಸಾ .1, 2 ನೇ ಸಂಖ್ಯೆಯ ಆಪಾದಿತಳ ತಂದೆಯು, 2 ನೇ ಸಂಖ್ಯೆಯ ಆಪಾಧಿತಳಿಗೆ ಪಾಲನ್ನು ನೀಡಿದ್ದರೆಂಬುದನ್ನು, ಅದರಿಂದ ಅವಳಿಗೆ ಒಳ್ಳೆಯ ಆದಾಯ ಬರುತ್ತಿತ್ತೆಂಬುದನ್ನು ಒಪ್ಪಿಕೊಂಡಿದ್ದಾಳೆ.ಅಷ್ಟೇ ಅಲ್ಲದೆ, ಪಾಟೀ-ಸವಾಲಿನಲ್ಲಿ, 1 ನೇ ಸಂಖ್ಯೆಯ ಆಪಾದಿತ-ಸುಬ್ರಹ್ಮಣ್ಯನು 2 ನೇ ಸಂಖ್ಯೆಯ ಆಪಾದಿತಳ ದೂರದ ಸಹೋದರನಾಗಿದ್ದಾನೆಂಬ ಸಂಗತಿಯನ್ನು ಹೊರತೆಗೆಯಲಾಗಿದೆ ಹಾಗೂ ಮೃತಳು ಹಾಗೂ 2 ನೇ ಸಂಖ್ಯೆಯ ಆಪಾದಿತಳ ನಡುವೆ ಸ್ವತ್ತಿನ ಪಾಲು ಮಾಡುವ ಮೊದಲು ಪಂಚಾಯಿತಿ ನಡೆದಿತ್ತೆಂಬುದನ್ನು ಬಹಿರಂಗಪಡಿಸಿದ್ದಾಳೆ.ಪ್ರಾ.ಸಾ .1 ಮೃತ-ಶ್ರೀಮತಿ ಕಮಲಮ್ಮನು ಕಾಣೆಯಾಗಿದ್ದಳು ಎಂಬುದು ತಿಳಿದುಬಂದ ನಂತರವೂ ಕೂಡ ಮೃತಳ ಮೊಬೈಲ್ಗೆ ಯಾವುದೇ ಕರೆಯನ್ನು ಮಾಡಿರಲಿಲ್ಲವೆಂಬುದನ್ನು ಸಹ ಒಪ್ಪಿಕೊಂಡಿದ್ದಾಳೆ.

14. 3 ನೇ ಸಂಖ್ಯೆಯ ಆಪಾದಿತನು ಸುಮಾರು 3 ರಿಂದ 3, ತಿಂಗಳುಗಳ ಹಿಂದೆ 1 ನೇ ಸಂಖ್ಯೆಯ ಆಪಾದಿತನು ಕಮಲಮ್ಮನನ್ನು ಕೊಲೆಮಾಡಿದ್ದು, ಮೃತದೇಹವನ್ನು ಹೂಳುವ ಸಲುವಾಗಿ ಎರಡು ಬ್ರಾಂದಿ ಬಾಟಲುಗಳನ್ನು ನೀಡಿ ತನ್ನ ಸಹಾಯವನ್ನು ಕೇಳಿದ್ದನು ಎಂದು ತಾನು ನಿರಾಕರಿಸಿದಾಗ, ಅವನ ಭಾವ ಮೈದುನ ಶ್ರೀನಿವಾಸೇಗೌಡನಿಗೆ ಮಾಡಿದಂತೆ ತನ್ನ ಜೀವವನ್ನು ತೆಗೆಯುವುದಾಗಿ ಬೆದರಿಸಿದ್ದಾರೆ.ಆಗ ಭಯಗೊಂಡ ತಾನು ಮೃತದೇಹವನ್ನು ಕೊಂಡೊಯ್ದು ಹೂತು ಹಾಕುವುದಕ್ಕೆ ಅವನಿಗೆ ಸಹಾಯ ಮಾಡಿದನೆಂದು ಹೇಳುವಷ್ಟರ ಮಟ್ಟಿಗೆ ಪ್ರಾಸಿಕ್ಯೂಷನ್ನು ಪ್ರಾ.ಸಾ .7 ರ ಸಾಕ್ಷ್ಯವನ್ನು ಸಹ ಆಧರಿಸಿದೆ.ಪಾಟೀ-ಸವಾಲಿನಲ್ಲಿ, 3 ನೇ ಆಪಾದಿತನಲ್ಲಿ ತನಗೆ ಯಾವುದೇ ವಿಶ್ವಾಸವಿರಲಿಲ್ಲವೆಂಬುದನ್ನು ಹೊರಗೆಡವಿದ್ದಾನೆ.ಕಾಣೆಯಾದ ಬಗ್ಗೆ ದೂರನ್ನು ಸಲ್ಲಿಸಲು ಬಂದಾಗ, ಆ ಆ ಸಮಯದಲ್ಲಿ, 1 ನೇ ಆಪಾದಿತನೊಂದಿಗೆ ಅನೈತಿಕ ಸಂಬಂಧವನ್ನು ಹೊಂದಿರುವುದಕ್ಕಾಗಿ 2 ನೇ ಆಪಾದಿತಳನ್ನು ಅವನ ಅತ್ತೆಯು ಯಾವಾಗಲೂ ಬೈಯ್ಯುತ್ತಿದ್ದುದು ಅವನಿಗೆ ತಿಳಿದುಬಂತು.ಕಾಣೆಯಾದ ಬಗ್ಗೆ ದೂರನ್ನು ಸಲ್ಲಿಸಿದ ನಂತರ, ಪೊಲೀಸರು ಅವನು ಯಾವುದೇ ಸಂಶಯವನ್ನು ವ್ಯಕ್ತಪಡಿಸುತ್ತಿದ್ದನೇ ಎಂಬ ಬಗ್ಗೆ ವಿಚಾರಣೆ ನಡೆಸಿದ್ದು ಆ ಸಮಯದಲ್ಲಿ, ಪೊಲೀಸರಿಗೆ ಸದರಿ ಸಂಗತಿಯ ಬಗ್ಗೆ ಅವನು ಹೇಳಿದ್ದು ಪೊಲೀಸರು 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರ ಹೆಸರುಗಳನ್ನು ದಾಖಲಿಸಿದ್ದಾರೆ.ಪೊಲೀಸರು ಬಂದಾಗ, 1 ನೇ ಹಾಗೂ 2 ನೇ ಆಪಾದಿತರು ಲಭ್ಯವಿಲ್ಲದಿದ್ದುದರಿಂದ ಅವರ ವಿಚಾರಣೆಗಳನ್ನು ಪೊಲೀಸರು ನಡೆಸಿರಲಿಲ್ಲ.ಅವನು 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರು ಗ್ರಾಮದಲ್ಲಿ ಲಭ್ಯವಿಲ್ಲದಿರುವ ಬಗ್ಗೆ ಪೊಲೀಸರಿಗೆ ತಿಳಿಸಿದ್ದಾನೆ.

15. 3 ನೇ ಸಂಖ್ಯೆಯ ಆಪಾದಿತನೇ ತನ್ನ ಮುಂದೆ ಹೆಚ್ಚಿನ ನ್ಯಾಯಿಕ ತಪ್ಪೊಪ್ಪಿಗೆಯನ್ನು ಮಾಡಿಕೊಂಡನೆಂಬುದು ಪ್ರಾ.ಸಾ .7 ರ ವಾದವಾಗಿದೆ.ಅಷ್ಟೇ ಅಲ್ಲದೆ, ಪ್ರಾ.ಸಾ .7 ಮೊದಲ ಬಾರಿಗೆ ಕಾಣೆಯಾದ ದೂರನ್ನು ನೀಡಿದ್ದು, 3 ನೇ ಸಂಖ್ಯೆಯ ಆಪಾದಿತನಿಂದ ಮಾಹಿತಿಯನ್ನು ಪಡೆದುಕೊಂಡ ನಂತರ,ದಿನಾಂಕ: 10-12-2010 ರಂದು ದೂರನ್ನು ಸಲ್ಲಿಸಿದ್ದನು ಎಂಬುದನ್ನು ಗಮನಿಸುವುದು ಪ್ರಮುಖವಾಗಿದೆ.1 ನೇ ಹಾಗೂ 2 ನೇ ಆಪಾದಿತರ ನಡುವೆ ಅನೈತಿಕ ಸಂಬಂಧ ಇತ್ತು ಎಂಬುದನ್ನು ಮೃತಳು ಹೇಳುತ್ತಿದ್ದಳು ಎಂಬುದನ್ನು ಪ್ರಾ.ಸಾ .1 ಸ್ಪಷ್ಟವಾಗಿ ತಿಳಿಸಿರುವುದನ್ನು ಹಾಗೂ ಮೃತಳು ಮತ್ತು 1 ಹಾಗೂ 2 ನೇ ಸಂಖ್ಯೆಯ ಆಪಾದಿತರ ನಡುವೆ ದ್ವೇಷಭಾವನೆಯಿತ್ತು ಎಂಬುದನ್ನು ಗಮನಿಸಬೇಕಾಗಿದೆ.ಅಧಿವಿಚಾರಣಾ ನ್ಯಾಯಾಧೀಶರು, ಕೊಲೆಯ ಪ್ರೇರೇಪಣೆಗೆ ಸಂಬಂಧಪಡುವಷ್ಟರಮಟ್ಟಿಗೆ, ಸಾಕ್ಷಿಯನ್ನು ಪರಿಗಣಿಸುವಾಗ, ಪ್ರಾ.ಸಾ .1 ರ ಸಾಕ್ಷ್ಯವನ್ನು ಅವಲಂಬಿಸಿಲ್ಲ.ಪ್ರಾ.ಸಾ .7 ತನ್ನ ಪಾಟೀ-ಸವಾಲಿನಲ್ಲಿ, 3 ನೇ ಸಂಖ್ಯೆಯ ಆಪಾದಿತನಲ್ಲಿ ತಾನು ಯಾವುದೇ ವಿಶ್ವಾಸ ಇಟ್ಟಿರುವುದಿಲ್ಲವೆಂದು ಹೇಳಿದ್ದಾನೆ, ಹೀಗಾಗಿ ವಿಚಾರಣಾ ನ್ಯಾಯಾಲಯವು, ಸನ್ನಿವೇಶಗಳು ಹೀಗಿರುವಾಗ ನ್ಯಾಯಾಲಯವು ಅಂಥ ಸಾಕ್ಷ್ಯವನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದೆ.ಕೊಲೆಯು ಆಗಸ್ಟ್ ತಿಂಗಳಲ್ಲಿ ನಡೆದಿದ್ದು, ಬಹುತೇಕ ಕೊಲೆಯಾದ ನಂತರ ಮೂರು ತಿಂಗಳುಗಳ ತರುವಾಯ, 3 ನೇ ಸಂಖ್ಯೆಯ ಆಪಾದಿತನ ಮೂಲಕ ಶ್ರೀಮತಿ ಕಮಲಮ್ಮನ ಸಾವಿನ ಬಗ್ಗೆ ಪ್ರಾ.ಸಾ .7 ಕ್ಕೆ ತಿಳಿದುಬಂದಿದೆ ಎಂಬುದನ್ನು ಗಮನಿಸಬೇಕಾಗಿದೆ ಹಾಗೂ ಹೆಚ್ಚಿನ ನ್ಯಾಯಿಕ ತನ್ನೊಪ್ಪಿಗೆಯು ಸಾಕ್ಷ್ಯದ ಒಂದು ದುರ್ಬಲ ಭಾಗವಾಗಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.ನಮ್ಮ ಮುಂದಿರುವ ಪ್ರಕರಣದಲ್ಲಿ ಪ್ರಾ.ಸಾ .1 ನಿರ್ದಿಷ್ಟವಾಗಿ, 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರಿಗೆ ಅನೈತಿಕ ಸಂಬಂಧವಿತ್ತೆಂದು ಅವಳ

ತಾಯಿ, ಹೇಳುತ್ತಿದ್ದರೆಂಬುದನ್ನು ಹಾಗೂ ಅನೈತಿಕ ಸಂಬಂಧದ ಬಗ್ಗೆ ಅವರಿಬ್ಬರಿಗೂ ಬೈಯ್ಯುತ್ತಿದ್ದಳು ಎಂದು ಹೇಳಿರುವುದನ್ನು ಗಮನಿಸಬೇಕಾಗಿದೆ.ನಮ್ಮ ಮುಂದಿರುವ ಈ ಪ್ರಕರಣದಲ್ಲಿ 1 ನೇ ಹಾಗೂ 3 ನೇ ಸಂಖ್ಯೆಯ ಆಪಾದಿತರ ಸೂಚನೆಯಂತೆ ದೇಹವನ್ನು ಶೋಧಿಸಲಾಯಿತೆಂಬುದನ್ನು ಹಾಗೂ ಹೊರಬೈಲು ಗ್ರಾಮದ ಸರ್ವೆ ನಂ .121 ರ ಭೂಮಿಯಿಂದ ಅಗೆದು ತೆಗೆಯಲಾಯಿತೆಂದು ಹೇಳಿರುವುದನ್ನು ಸಹ ಗಮನಿಸಬೇಕಾಗಿದೆ.ಅನೈತಿಕ ಸಂಬಂಧಕ್ಕೆ ಸಂಬಂಧಪಟ್ಟಂತೆ, ನ್ಯಾಯಾಲಯವು ಯಾವುದೇ ಸಾಕ್ಷಿದಾರರು ಹೇಳಿಕೆ ನೀಡುವುದನ್ನು ನಿರೀಕ್ಷಿಸಲು ಸಾಧ್ಯವಿಲ್ಲ.ಕೇವಲ ಸಾಂದರ್ಭಿಕವಾಗಿ ಅನೈತಿಕ ಸ ಂ ಬ ಂ ಧವನ್ನು ರುಜುವಾತುಪಡಿಸಬಹುದೇ ಹೊರತು ಪ್ರತ್ಯಕ್ಷ ಸಾಕ್ಷ್ಯವನ್ನು ಹಾಜರುಪಡಿಸಲು ಸಾಧ್ಯವಿಲ್ಲ.ಅಧಿವಿಚಾರಣಾ ನ್ಯಾಯಾಲಯವು, ಪ್ರಾಸಿಕ್ಯೂಷನ್ನು ಕಾರಣವನ್ನು ರುಜುವಾತುಪಡಿಸಿರುವುದಿಲ್ಲವೆನ್ನುವ ನಿರ್ಣಯಕ್ಕೆ ಬರುವಲ್ಲಿ ದೋಷವೆಸಗಿದೆ.ಅನೈತಿಕ ಸಂಬಂಧವನ್ನು ಮುಂದುವರಿಸಲು 1 ನೇ ಹಾಗೂ 2 ನೇ ಆಪಾದಿತರ ಮಾರ್ಗಕ್ಕೆ ಮೃತಳು ಅಡ್ಡಬಂದುದರಿಂದ ಅವರು ಮೃತಳನ್ನು ಕೊಲೆ ಮಾಡಿದರು ಎಂಬುದು ಪ್ರಾಸಿಕ್ಯೂಷನ್ನ ನಿರ್ದಿಷ್ಟ ವಾದವಾಗಿದೆ.ಅನೈತಿಕ ಸಂಬಂಧವನ್ನು ರುಜುವಾತುಪಡಿಸಲು, ಅವರಿಬ್ಬರ ಕೃತ್ಯಕ್ಕೆ ಅವರು ಸಾಕ್ಷಿಯಾಗಿರುವುದನ್ನು ಮಾತನಾಡಲು ನ್ಯಾಯಾಲಯವು ನಿರೀಕ್ಷಿಸುವುದಿಲ್ಲ ಆದರೆ ಯಾವ ಸನ್ನಿವೇಶಗಳ ಅಡಿಯಲ್ಲಿ ಕೊಲೆ ನಡೆದಿದೆಯೆನ್ನುವುದನ್ನು ಗಮನಕ್ಕೆ ತೆಗೆದುಕೊಂಡು ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯವನ್ನು ಪರಿಶೀಲಿಸಬೇಕಾಗಿದೆ.ಹೀಗಾಗಿ ಯಾವುದೇ ಕಾರಣ ಇಲ್ಲ ಎನ್ನುವ ಪ್ರಸ್ತುತ ನಿರ್ಣಯವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

16. ಆಪಾದಿತನಿಂದ ಸ್ವೀಕರಿಸಿದ ಮಾಹಿತಿಗೆ ಸಂಬಂಧಿಸಿದಂತೆ ಸಾಕ್ಷ್ಯ ಎಂ ಅಧಿನಿಯಮ, 1872 ರ 27 ನೇ ಪ್ರಕರಣವನ್ನು ಉಲ್ಲೇಖಿಸಲು ನಾವು ಬಯಸಿದ್ದು, ಈ ಪ್ರಕರಣದಲ್ಲಿ 1 ನೇ ಹಾಗೂ 3 ನೇ ಆಪಾದಿತರು ನೀಡಿದ ಮಾಹಿತಿಯನ್ನು ಆಧರಿಸಿ ದೇಹವನ್ನು ವಶಪಡಿಸಿಕೊಳ್ಳಲಾಗಿತ್ತು ಹಾಗೂ ಸಾಕ್ಷ್ಯ ಎ ಅಧಿನಿಯಮದ 27 ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:

" 27, ಆಪಾದಿತನಿಂದ ಪಡೆದ ಮಾಹಿತಿಯಲ್ಲಿಯ ಎಷ್ಟು ಭಾಗವನ್ನು ಸಾಬೀತು ಮಾಡಬಹುದು.ಪರಂತು, ಪೊಲೀಸ್ ಅಧಿಕಾರಿಯ ಅಭಿರಕ್ಷೆಯಲ್ಲಿರುವ, ಯಾವುದೇ ಅಪರಾಧದ ಬಗ್ಗೆ ಆಪಾದಿತನಾದ ವ್ಯಕ್ತಿಯಿಂದ ಪಡೆದ ಮಾಹಿತಿಯ ೧ ಪರಿಣಾಮವಾಗಿ ಯಾವುದೇ ಸಂಗತಿಯು ಕಂಡುಬಂದಿದೆಯೆಂದು ಅಭಿಸಾಕ್ಷ್ಯಕೊಟ್ಟಾಗ, ಆ ಮೂಲಕ ಕಂಡು ಹಿಡಿದ ಸಂಗತಿ ಸ್ಪಷ್ಟವಾಗಿ ಸಂಬಂಧಿಸುವಷ್ಟರ ಮಟ್ಟಿಗೆ ಅಂಥ ಮಾಹಿತಿಯ ಭಾಗವನ್ನು, ಅದನ್ನು ತನ್ನೊಪ್ಪಿಗೆಯೆನ್ನಬಹುದಾಗಿರಲಿ, ಇಲ್ಲದಿರಲಿ, ಸಾಬೀತು ಮಾಡಬಹುದು."

17. ನಾವು, ಸ್ವಾಮಿ ಶ್ರದ್ಧಾನಂದ @ ಮುರಳಿ ಮನೋಹರ್ ಮಿಶ್ರಾ ವಿರುದ್ಧ ಕರ್ನಾಟಕ ರಾಜ್ಯ ' 9, ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸಲು ಬಯಸಿದ್ದು, ಇದರಲ್ಲಿನ ಇಂತಹುದೇ ಸನ್ನಿವೇಶಗಳಲ್ಲಿ ದೇಹವನ್ನು ವಶಪಡಿಸಿಕೊಂಡಿದ್ದು, ಇದನ್ನು ಇದೇ ಉದ್ದೇಶಕ್ಕಾಗಿ ಮೊದಲು ಮಾಡಿಸಿದ್ದ ಉದ್ದನೆಯ ಮರದ ಪೆಟ್ಟಿಗೆಯಲ್ಲಿ ಇಡಲಾಗಿತ್ತು ಹಾಗೂ ಅವರ ಸಾಮಾನ್ಯ ಮಲಗುವ ಕೋಣೆಗಿಂತ ಸ್ವಲ್ಪ ಹೊರಗಿನ ತನ್ನ ಮನೆಯ ಅಂಗಳದಲ್ಲಿ ವಿಶೇಷವಾಗಿ ಅಗೆದು ತೋಡಿದ್ದ ಗುಂಡಿಯೊಳಗೆ ಪೆಟ್ಟಿಗೆಯನ್ನು ಬಿಡಲಾಗಿತ್ತು.ಮಾನ್ಯ ಸರ್ವೋಚ್‌ಚ ನ್ಯಾಯಾಲಯವು, ಸಾಕ್ಷ್ಯ ಎಲಾ ಅಧಿನಿಯಮದ 27 ನೇ ಪ್ರಕರಣವನ್ನು ಅನ್ವಯಿಸುತ್ತಾ, ಆಪಾದಿತನು ನೀಡಿದ ಮಾಹಿತಿಯ ಆಧಾರದ ಮೇಲೆ ಅಗೆದು ತೆಗೆದು ಕಂಡುಹಿಡಿದ ಹಾಗೂ ಶೋಧಿಸಿದ್ದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು ಎಂದು ಅಭಿಪ್ರಾಯಪಟ್ಟಿದೆ.ಹೀಗಾಗಿ 1 ನೇ ಹಾಗೂ 3 ನೇ ಸಂಖ್ಯೆಯ ಆಪಾದಿತರು ಪೊಲೀಸರನ್ನು ಕರೆದುಕೊಂಡು ಹೋಗಿ, ಪ್ರಾ.ಸಾ .15 ಎಂದು ವಿಚಾರಣೆ ಮಾಡಲಾಗಿರುವ ಉಪವಿಭಾಗಾಧಿಕಾರಿಯವರ ಸಮ್ಮುಖದಲ್ಲಿ ದೇಹವನ್ನು ಅಗೆದು ತೆಗೆಯಲಾಗಿತ್ತು ಎಂಬ ಕಾರಣಕ್ಕಾಗಿ ನಮ್ಮ ಮುಂದಿರುವ ಪ್ರಕರಣಕ್ಕೆ ಮೇಲಿನ ಪ್ರಕರಣವನ್ನು ಸಮುಚಿತವಾಗಿ ಅನ್ವಯಿಸಬಹುದು.

18. ಅಸರ್ ಮಹಮದ್ ಹಾಗೂ ಇತರರು -ವಿರುದ್ಧ ಉತ್ತರ ಪ್ರದೇಶ ರಾಜ್ಯ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಚ ಅಭಿಪ್ರಾಯಪಟ್ಟಿದೆ:

" ಸಂಗತಿಗಳು ಸ್ವಯಂ-ದಾಖಲೆಗಳಿಗಿರುವ ಅಗತ್ಯವಿಲ್ಲ ಹಾಗೂ ಸಾಕ್ಷ್ಯ ಲ್ಯು ಅಧಿನಿಯಮದ 27 ನೇ ಪ್ರಕರಣದಲ್ಲಿ ಉದ್ದೇಶಿಸಲಾದಂಥ " ಸಂಗತಿ ' ಎಂಬ ಪದವನ್ನು ' ವಾಸ್ತವಿಕ ಭೌತಿಕ ಮುದ್ದೆ ಮಾಲು ಎಂಬುದಕ್ಕೆ ಸೀಮಿತಗೊಳಿಸಿಲ್ಲ.ಆಪಾದಿತನು ನೀಡಿದ ಮಾಹಿತಿಯಿಂದ ಒಂದು ನಿರ್ದಿಷ್ಟ ಸ್ಥಳದಲ್ಲಿ ಮಾಹಿತಿಯ ಇರುವಿಕೆಗೆ ಸಂಬಂಧಿಸಿದಂತೆ ಅದರ ಬಗ್ಗೆ ತಿಳಿದಿದೆ ಮತ್ತು ಮಾನಸಿಕ ಅರಿವಿದೆ ಎಂಬುದನ್ನು

ತೋರಿಸುತ್ತದೆಂಬ ಸಂಗತಿಯ ಕಾರಣದಿಂದ ಸಂಗತಿಯ ಅನ್ವೇಷಣೆ ಉದ್ಭವವಾಗುತ್ತದೆ.ಇದು ವಸ್ತುವಿನ ಶೋಧನೆ ಯಾವ ಸ್ಥಳದಿಂದ ಅದನ್ನು ಹಾಜರುಪಡಿಸಲಾಗಿದೆ ಹಾಗೂ ಅದು ಅಲ್ಲಿ ಇರುವುದರ ಬಗ್ಗೆ ಆಪಾದಿತನ ತಿಳಿವಳಿಕೆಯನ್ನು ಒಳಗೊಳ್ಳುತ್ತದೆ "

19. ನಾವು ಪಟ್ಟುರಾಜನ್ ವಿರುದ್ಧ ತಮಿಳುನಾಡು ರಾಜ್ಯ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ತೀರ್ಪನ್ನು ಅವಲಂಬಿಸಲು ಬಯಸಿದ್ದು, ಇದರಲ್ಲಿ, ಆಪಾದಿತನ ಸೂಚನೆಯಂತೆ ಮೃತದೇಹ ಹಾಗೂ ಮೃತರಿಗೆ ಸೇರಿದ ವಸ್ತುಗಳನ್ನು ಪತ್ತೆ ಮಾಡಿರುವುದು ಹಾಗೂ ಗುರುತಿಸುವುದು ಹಾಗೂ ಸನ್ನಿವೇಶಗಳ ಸರಣಿಗಳಲ್ಲಿನ ಸಂಬಂಧಗಳ ಬಗ್ಗೆ ಆಪಾದಿತನು ವಿವರಣೆ ನೀಡದಿರುವುದು ಆಪಾದಿತನ ವಿರುದ್ಧ ಆರೋಪವನ್ನು ದೃಢವಾಗಿ ಪುಷ್ಟೀಕರಿಸುತ್ತವೆಂದು ಅಭಿಪ್ರಾಯಪಡಲಾಗಿದೆ.ಸಂಗತಿಯ ಶೋಧನೆಗೆ ಸಂಬಂಧಿಸಿದಂತೆ ಸಾಕ್ಷ ಎ ಅಧಿನಿಯಮದ 27 ನೇ ಪ್ರಕರಣವನ್ನು ಉಲ್ಲೇಖಿಸಿರುವ ಸರ್ವೋಚ್ಚ ನ್ಯಾಯಾಲಯವು ಕೂಡ ಯಾವ ಸ್ಥಳದಿಂದ ಈ ಮು ಂ ಚೆ ಆಪಾದಿತ ವಸ್ತುವನ್ನು ವಶಪಡಿಸಿಕೊಳ್ಳಲಾಗಿತ್ತೋ ಆ ಸ್ಥಳಕ್ಕೆ ಆಪಾದಿತನು ಪೊಲೀಸರನ್ನು ಕರೆದುಕೊಂಡು ಹೋಗುವುದಕ್ಕೆ ಮೊದಲು ಸಂಬಂಧಪಟ್ಟ ಸಂಗತಿಯನ್ನು ಬಹಿರಂಗಪಡಿಸಿರುವ ಆಪಾದಿಸಲಾದ ವಸ್ತುವಿನ ಶೋಧನೆಯನ್ನು ಹಾಗೂ ಮೃತದೇಹದ ಶೋಧನೆಯನ್ನು ಆಪಾದಿತನ ಸೂಚನೆಯ ಮೇರೆಗೆ ಮಾಡಲಾಗಿತ್ತು ಎಂದು ಅಭಿಪ್ರಾಯಪಟ್ಟಿದೆ.ನಮ್ಮ ಮುಂದಿರುವ ಪ್ರಕರಣದಲ್ಲಿಯೂ ಕೂಡ, 1 ನೇ ಹಾಗೂ 3 ನೇ ಸಂಖ್ಯೆಯ ಆಪಾದಿತರ ಸೂಚನೆ ಮೇರೆಗೆ ಮೃತದೇಹವನ್ನು ಶೋಧಿಸಲಾಗಿತ್ತು.ಅಷ್ಟೇ ಅಲ್ಲದೆ, ಪೊಲೀಸರ ಮುಂದೆ ಆಪಾದಿತನು ತನ್ನೊಪ್ಪಿಕೊಂಡರೆ, ತನ್ನೊಪ್ಪಿಗೆಯ ಭಾಗವು ಯಾವುದೇ ಆಪಾದಿಸಲಾದ ಸಾಕ್ಷ್ಯಾಧಾರವನ್ನು ಪತ್ತೆಹಚ್ಚಲು ಸಹಕಾರಿಯಾಗಿದ್ದರೆ, ಅಂಥ ಭಾಗವೊಂದನ್ನೇ ಸಾಕ್ಷ್ಯ ಅಧಿನಿಯಮದ 27 ನೇ ಪ್ರಕರಣದ ಅಡಿಯಲ್ಲಿ ಅಂಗೀಕರಿಸಬಹುದು ಎಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.ನಮ್ಮ ಮುಂದಿರುವ ಪ್ರಕರಣದಲ್ಲಿ ಕೂಡ ಆಪಾದಿತ ವ್ಯಕ್ತಿಗಳು ಪೊಲೀಸರನ್ನು ಹಾಗೂ ಪಂಚರನ್ನು ಕರೆದುಕೊಂಡು ಹೋಗಿದ್ದಾರೆ.ಪ್ರಾ.ಸಾ .15 ಉಪವಿಭಾಗಾಧಿಕಾರಿಯವರ ಸಮ್ಮುಖದಲ್ಲಿ ದೇಹವನ್ನು ಅಗೆದು ತೆಗೆಯಲಾಗಿದೆ.ಹೀಗಾಗಿ ಮೇಲೆ ಉಲ್ಲೇಖಿಸಲಾದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಪ್ರಸಕ್ತ ಪ್ರಕರಣಕ್ಕೆ ಯುಕ್ತವಾಗಿ ಅನ್ವಯಿಸಬಹುದಾಗಿದೆ.

20. ಸಾಕ್ಷ್ಯ ಅಧಿನಿಯಮದ 27 ನೇ ಪ್ರಕರಣವು, ಆಪಾದಿತನ ಸೂಚನೆ ಮೇರೆಗೆ ಅದನ್ನು ಪತ್ತೆ ಹಚ್ಚಿದರೆ, ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆಯೆಂಬುದನ್ನು ಸ್ಪಷ್ಟಪಡಿಸುತ್ತದೆ ಎಂಬುದನ್ನು ಗಮನಿಸಬೇಕಾಗುತ್ತದೆ.ನಮ್ಮ ಮುಂದಿರುವ ಪ್ರಕರಣದಲ್ಲಿ, ಪ್ರಾ.ಸಾ .1, 2 ಹಾಗೂ 8 ಇವರು ಕೊಳೆತುಹೋದ ದೇಹವನ್ನು ಅಗೆದು ತೆಗೆದಿರುವುದಕ್ಕೆ ಎಲ್ಲರೂ ಸಾಕ್ಷಿದಾರರಾಗಿದ್ದು, ಇವರು ತಮ್ಮ ಎದುರಿನಲ್ಲಿ ಉಪವಿಭಾಗಾಧಿಕಾರಿಯಾಗಿರುವ ಪ್ರಾ.ಸಾ .15 ರ ಸಮ್ಮುಖದಲ್ಲಿ ದೇಹವನ್ನು ಅಗೆದು ತೆಗೆಯಲು ಪ್ರಾ.ಸಾ .3 ಸಹಾಯಮಾಡಿದರೆಂದು ನ್ಯಾಯಾಲಯದ ಮುಂದೆ ನೀಡಿರುವ ಹೇಳಿಕೆಯನ್ನು ಗಮನಿಸಬೇಕಾಗಿದೆ.1 ಹಾಗೂ 3 ನೇ ಸಂಖ್ಯೆಯ ಆಪಾದಿತರು ಕೊಲೆಯನ್ನು ಮಾಡಿದ ನಂತರ ದೇಹವನ್ನು ಹೂತಿದ್ದು ಸ್ಥಳವನ್ನು ತೋರಿಸುವುದಾಗಿ ಸ್ವಯಂ ಹೇಳಿಕೆಯನ್ನು ನೀಡಿರುವುದರಿಂದ ದೇಹವನ್ನು ಅಗೆದು ತೆಗೆಯಲು ಸಿ.ಡಬ್ಲ್ಯು .42 ಪ್ರಾ.ಸಾ .15 ನ್ನು ಮನವಿ ಮಾಡಿದ್ದಾರೆಂಬುದು ಪ್ರಾಸಿಕ್ಯೂಷನ್ನ ವಾದವಾಗಿದೆ.ಈ ಎಲ್ಲಾ ಸಾಕ್ಷಿದಾರರ ಸಮ್ಮುಖದಲ್ಲಿ ದೇಹವನ್ನು ಅಗೆದು ಹೊರತೆಗೆದಿದ್ದು, ಅದು ಮೃತ-ಶ್ರೀಮತಿ ಕಮಲಮ್ಮನಿಗೆ ಸೇರಿದ ದೇಹವೆಂದು ಗುರುತಿಸಲಾಗಿತ್ತು ಹಾಗೂ ಸದರಿ ದೇಹವು ಶ್ರೀಮತಿ ಕಮಲಮ್ಮನದು ಎಂದು ಡಿಎನ್ ಕೂಡ ರುಜುವಾತುಪಡಿಸಿತ್ತು.

21. 1 ನೇ ಸಂಖ್ಯೆಯ ಆಪಾದಿತನು ಕೊಲೆಯನ್ನು ಮಾಡಿದ ನಂತರ ಕೊಲೆಯ ಸಾಕ್ಷ್ಯವನ್ನು ಮರೆಮಾಚಲು 3 ನೇ ಸಂಖ್ಯೆಯ ಆಪಾದಿತನ ನೆರವನ್ನು ಪಡೆದುಕೊಂಡು ದೇಹವನ್ನು ಹೂತುಹಾಕಿದ್ದಾನೆ. ಹೀಗಾಗಿ, ಅವರಿಬ್ಬರೂ ಸಾಕ್ಷ್ಯವನ್ನು ಮುಚ್ಚಿಹಾಕುವಲ್ಲಿ ಕೈಚಳಕ ತೋರಿಸಿದ್ದಾರೆ.ಹೀಗಾಗಿ ಭಾರತ ದಂಡ ಸಂಹಿತೆಯ 201 ನೇ ಪ್ರಕರಣವನ್ನು ಅನ್ವಯಿಸಿಕೊಳ್ಳಲಾಗಿದೆ.

22. ಪ್ರಾಸಿಕ್ಯೂಷನ್ನು ಆಧರಿಸಿದ ಇತರ ಸನ್ನಿವೇಶಗಳಾವುವೆಂದರೆ, 1 ನೇ ಸಂಖ್ಯೆಯ ಆಪಾದಿತನನ್ನು ದಸ್ತಗಿರಿ ಮಾಡಿದ ಮೇಲೆ, ಮೃತಳಿಗೆ ಸೇರಿದ ಆಭರಣಗಳನ್ನು 1 ನೇ ಸಂಖ್ಯೆಯ ಆಪಾದಿತನ ಸೂಚನೆ ಮೇರೆಗೆ ವಶಪಡಿಸಿಕೊಳ್ಳಲಾಯಿತು.ನಿರ್ದಿಷ್ಟವಾಗಿ, 1 ನೇ ಸಂಖ್ಯೆಯ ಆಪಾದಿತನನ್ನು ಸೋಮೇಶ್ವರ ಜ್ಯೂಯಲರ್

ಅಂಗಡಿಗೆ ಅವರನ್ನು ಕರೆದುಕೊಂಡು ಹೋಗಿ, ತಾನು ಮಾರಾಟ ಮಾಡಿರುವ ಚಿನ್ನದ ಆಭರಣಗಳನ್ನು ನೀಡಲು ಜ್ಯೂಯಲರಿ ಅಂಗಡಿ ಮಾಲೀಕನನ್ನು ಅವನು ಕೇಳಿದನೆಂದು ಪ್ರಾ.ಸಾ .2 ತಿಳಿಸಿರುತ್ತಾನೆ.ಮಾಲೀಕನನ್ನು ಪ್ರಾ.ಸಾ .9 ಎಂದು ವಿಚಾರಣೆ ಮಾಡಲಾಗಿದ್ದು, ಅವನೂ ಕೂಡ 1 ನೇ ಸಂಖ್ಯೆಯ ಆಪಾದಿತನು ಬಂದು, ಒಡವೆಗಳನ್ನು ಮಾರಾಟ ಮಾಡಿದ್ದನೆಂದು ಹೇಳಿದ್ದಾನೆ.ಅವನು ಆಪಾದಿತನನ್ನು ಗುರುತಿಸಿದ್ದು, ಆಭರಣಗಳನ್ನು ಖರೀದಿಸಿದ ಮೇಲೆ ತಾನು ಆಪಾದಿತನಿಗೆ 27,500/- ರೂ.ಗಳನ್ನು ಸಂದಾಯ ಮಾಡಿರುವುದಾಗಿ ಗುರುತಿಸಿದ್ದಾನೆ.ಪೊಲೀಸರು, ಸದರಿ ವಸ್ತುಗಳನ್ನು ಹಿಂದಿರುಗಿಸಲು ಅಂಗಡಿ ಮಾಲೀಕನನ್ನು ಕೇಳಿದಾಗ, ಪ್ರಾ.ಸಾ .9 ವಸ್ತುಗಳನ್ನು ಹಿಂದಿರುಗಿಸಿದ್ದು, ಸದರಿ ಒಡವೆಗಳನ್ನು ಮೃತರ ಮಗಳಾದ ಪ್ರಾ.ಸಾ .1 ಕೂಡ ಗುರುತಿಸಿದ್ದಾಳೆ.ಪಾಟೀ ಸವಾಲಿನಲ್ಲಿ, ಸದರಿ ಆಭರಣಗಳನ್ನು ಹೊಸದೆಂಬಂತೆ ಕಾಣುತ್ತಿದ್ದವೆಂಬುದನ್ನು ಬಹಿರಂಗಪಡಿಸಿರುವುದರಲ್ಲಿ ಯಾವುದೇ ಸಂಶಯವಿಲ್ಲ.ಪ್ರಾ.ಸಾ .1, ತನ್ನ ಸಾಕ್ಷಿಯಲ್ಲಿ ತನ್ನ ತಾಯಿಯು ಅದನ್ನು ಅಪರೂಪಕ್ಕೆ ಬಳಸುತ್ತಿದ್ದಳೆಂದು ತಿಳಿಸಿದ್ದು, ಮುದ್ದೆಮಾಲು 1 ರಿಂದ 3 ಆಭರಣಗಳು ಮೃತ ಶ್ರೀಮತಿ ಕಮಲಮ್ಮನಿಗೆ ಸೇರಿದ್ದಲ್ಲವೆಂಬ ಸೂಚನೆಯ ಸ್ಪಷ್ಟವಾಗಿ ತಿರಸ್ಕರಿಸಲಾಗಿದೆ ಹಾಗೂ ಅದನ್ನು ಹೊಸದಾಗಿ ತಯಾರಿಸಲಾಗಿದೆಯೆಂದು ಸದರಿ ಸೂಚನೆಯನ್ನು ಸಹ ಅಲ್ಲಗಳೆಯಲಾಗಿದೆ.ಪ್ರಾ.ಸಾ .1 ರ ಸಾಕ್ಷ್ಯ ಎಲಾ ಹಾಗೂ ಇತರ ಸಾಕ್ಷಿದಾರರು 1 ನೇ ಸಂಖ್ಯೆಯ ಆಪಾದಿತನು ಪ್ರಾ.ಸಾ .9 ರ ಅಂಗಡಿಗೆ ಸಾಕ್ಷಿದಾರನನ್ನು ಕರೆದುಕೊಂಡು ಹೋಗಿರುವುದರ ಬಗ್ಗೆ ನಿರ್ದಿಷ್ಟವಾಗಿದ್ದಾರೆ.ഢ ಪ್ರಾ.ಸಾ . 9 ತಾನು ಸುಮಾರು 3 1/2 ತಿಂಗಳುಗಳ ಹಿಂದೆ, ಹಣವನ್ನು ಸಂದಾಯಮಾಡಿ 1 ನೇಯ ಆಪಾದಿತನಿಂದ ಆಭರಣಗಳನ್ನು ತೆಗೆದುಕೊಂಡಿರುವುದನ್ನು ಸ್ಪಷ್ಟವಾಗಿ ಹೇಳಿದ್ದಾನೆ.ಪ್ರಾ.ಸಾ .9 ರ ಪಾಟೀ-ಸವಾಲಿನಲ್ಲಿ ತಾನು, ಚಿನ್ನವನ್ನು ಖರೀದಿಸಿರುವುದಕ್ಕೆ ಯಾವುದೇ ರಸೀದಿಯನ್ನು ನಿರ್ವಹಿಸಿಲ್ಲ ಅಷ್ಟೇ ಅಲ್ಲದೆ, 1 ನೇ ಸಂಖ್ಯೆಯ ಆಪಾದಿತನಿಂದ ಆಭರಣಗಳನ್ನು ಖರೀದಿಸಿದ್ದುದಕ್ಕೆ ಯಾವುದೇ ದಸ್ತಾವೇಜು ಇರುವುದಿಲ್ಲ ಎಂಬ ಉತ್ತರದ ಹೊರತಾಗಿ ಬೇರೆ ಯಾವ ಮಾಹಿತಿಯನ್ನು ಪಡೆಯಲಾಗಲಿಲ್ಲ.ಅಧಿವಿಚಾರಣಾ ನ್ಯಾಯಾಧೀಶರು ಪ್ರಾ.ಸಾ .1 ರ ಸಾಕ್ಷ್ಯವನ್ನು ಪರಿಗಣಿಸುವಾಗ, ಪ್ರಾ.ಸಾ .9 ತಾನು 1 ನೇ ಸಂಖ್ಯೆಯ ಆಪಾದಿತನನ್ನು ಗುರುತಿಸಿರುವನೆಂದು ನ್ಯಾಯಾಲಯದ ಮುಂದೆ ಸ್ಪಷ್ಟವಾಗಿ ಹೇಳಿಕೆ ನೀಡಿರುವುದನ್ನು ಮತ್ತು 1 ನೇ ಸಂಖ್ಯೆಯ ಆಪಾದಿತನಿಂದ ಆಭರಣಗಳನ್ನು ಸ್ವೀಕರಿಸಿರುವುದನ್ನು ಸ್ಪಷ್ಟವಾಗಿ ಹೇಳಿರುವುದನ್ನು ಗಮನಿಸುವಲ್ಲಿ ಅಧಿವಿಚಾರಣಾ ನ್ಯಾಯಾಧೀಶರು ವಿಫಲರಾಗಿರುತ್ತಾರೆ ಹಾಗೂ ಪ್ರಾ.ಸಾ .9 ರ ಪಾಟೀ-ಸವಾಲಿನಲ್ಲಿ ಅವನು, ಆಪಾದಿತ ಹಾಗೂ ತನ್ನ ನಡುವೆ ಹಗೆತನವಿತ್ತು ಎಂಬ ಬಗ್ಗೆ ಹಾಗೂ ಪ್ರಕರಣದಲ್ಲಿ ತನ್ನನ್ನು ತಪ್ಪಾಗಿ ಸೇರಿಸಲಾಗಿದೆ ಎಂಬ ಬಗ್ಗೆ ಏನನ್ನೂ ತಿಳಿಸಿರುವುದಿಲ್ಲ.1 ನೇ ಸಂಖ್ಯೆಯ ಆಪಾದಿತನು ಮಾರಾಟ ಮಾಡಿರುವ ಆಭರಣ ಮಳಿಗೆಯಿ ಂ ದ ಒಡವೆಗಳನ್ನು ವಶಪಡಿಸಿಕೊಂಡಿರುವುದನ್ನು ಪ್ರಾಸಿಕ್ಯೂಷನ್ನು ರುಜುವಾತುಪಡಿಸಿದರೂ, ಕೇವಲ ಯಾವುದೇ ರಸೀದಿ ಅಥವಾ ದಸ್ತಾವೇಜು ಇರುವುದಿಲ್ಲ ಎಂಬುದೊಂದೇ ಅಂಶ ಪ್ರಾಸಿಕ್ಯೂಷನ್ನ ವಾದಕ್ಕೆ ನಿರ್ಣಾಯಕ ಅಂಶವಾಗಲು ಸಾಧ್ಯವಿಲ್ಲ.ಅಧಿವಿಚಾರಣಾ ನ್ಯಾಯಾಲಯವು, ಚಿನ್ನಾಭರಣಗಳನ್ನು ಶೋಧಿಸುವುದಕ್ಕೆ ಸಂಬಂಧಿಸಿದಂತೆ ಪ್ರಾ.ಸಾ .1 ಹಾಗೂ ಪ್ರಾ.ಸಾ .9 ರ ಸಾಕ್ಷ್ಯವನ್ನು ನಂಬದೇ ಇರುವುದಕ್ಕೆ ಸಾಧ್ಯವೇ ಇಲ್ಲ.

23. ಮೃತರ ಮೊಬೈಲ್ ಫೋನನ್ನು ಮಾರಾಟ ಮಾಡಲಾಗಿತ್ತು ಹಾಗೂ ಪ್ರಾ.ಸಾ .16 ರಿಂದ ಅದನ್ನು ವಶಪಡಿಸಿಕೊಳ್ಳಲಾಗಿತ್ತು ಎಂಬ ಇತರ ಸನ್ನಿವೇಶಗಳನ್ನು ಸಹ ಪ್ರಾಸಿಕ್ಯೂಷನ್ ಅವಲಂಬಿಸಿದೆ.ಪ್ರಾ.ಸಾ .16, ತಾನು 1 ನೇ ಸಂಖ್ಯೆಯ ಆಪಾದಿತನೊಂದಿಗೆ ಆಗಾಗ ಮಲಗಿಕೊಳ್ಳುತ್ತಿದ್ದನೆಂದು ಹೇಳಿದ್ದಾನೆ.ಅಷ್ಟೇ ಅಲ್ಲದೆ ಅವನು ರೆಸ್ಟೋರೆಂಟ್ನಲ್ಲಿ ಪ್ರಾ.ಸಾ .16 ಕ್ಕೆ ಕ ಸಹಾಯಕನಾಗಿ ಕಾರ್ಯನಿರ್ವಹಿಸುತ್ತಿದ್ದ 1 ನೇ ಸಂಖ್ಯೆಯ ಆಪಾದಿತನು 14-12-2010 ಕ್ಕೆ ಸುಮಾರು ಎರಡು ತಿಂಗಳುಗಳ ಮೊದಲು ಒಂದು ಮೊಬೈಲ್ ಫೋನನ್ನು ತೋರಿಸಿದನೆಂದು ಹಾಗೂ ತನಗೆ ಹಣದ ಅವಶ್ಯಕತೆಯಿದ್ದು, ಅದಕ್ಕಾಗಿ ಅದನ್ನು ಮಾರಾಟ ಮಾಡಲು ಬಯಸಿರುವುದಾಗಿ ಹೇಳಿದನೆಂದು ತಿಳಿಸಿದ್ದಾನೆ.ಪ್ರಾ.ಸಾ .16 ಕೂಡ ಮೊಬೈಲ್ನ ಅಗತ್ಯತೆ ಇದ್ದುದರಿಂದ, 700/- ರೂ.ಗಳನ್ನು ಸಂದಾಯಮಾಡಿ 1 ನೇ ಸಂಖ್ಯೆಯ ಆಪಾದಿತನಿಂದ ಅದನ್ನು ಖರೀದಿಸಿದ್ದಾಗಿ ಹೇಳಿದ್ದಾನೆ.ಇದರಲ್ಲಿ ಯಾವುದೇ ಸಿಮ್ ಇರಲಿಲ್ಲ.ಅಷ್ಟೆ ಅಲ್ಲದೆ, ದಿನಾಂಕ 13-12-2010 ರಂದು ಪೊಲೀಸು ಠಾಣೆಯಿಂದ ತನಗೆ ಕರೆಬಂತೆಂದು, ಅಲ್ಲಿ 1 ನೇ ಸಂಖ್ಯೆಯ ಆಪಾದಿತನೂ ಇದ್ದುದಾಗಿ ತಿಳಿಸಿದ್ದಾನೆ.ಅವನು, ಆತನನ್ನು ಗುರುತಿಸಿ, ಪ್ರಾ.ಸಾ .7, ಪ್ರಾ.ಸಾ .10 ಹಾಗೂ ಸಿ.ಸಬ್ಲ್ಯೂ .23 ರ ಸಮ್ಮುಖದಲ್ಲಿ ಸದರಿ ಮೊಬೈಲನ್ನು ಹಾಜರುಪಡಿಸಿದ್ದಾನೆ.ನಿಶಾನೆ ಪಿ .12 ರ ಪ್ರಕಾರ ಮಹಜರನ್ನು ಬರೆಯುವ ಮೂಲಕ ಅದನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು.ಪಾಟೀ-ಸವಾಲಿನಲ್ಲಿ, 1 ನೇ ಸಂಖ್ಯೆಯ ಆಪಾದಿತನು ಮೊಬೈಲನ್ನು ಎಂದರೆ

ಮು.ಮಾ.ಸಂ .4 ಫೋನನ್ನು ನೀಡಿದಾಗ, ಅದರಲ್ಲಿ ಯಾವುದೇ ಸಿಮ್ ಇರಲಿಲ್ಲವೆಂದು ಹಾಗೂ ಆಪಾದಿತನು ಅದನ್ನು ಬಳಸುತ್ತಿದ್ದನೇ ಅಥವಾ ಇಲ್ಲವೇ ಎಂಬುದು ಕೂಡ ಗೊತ್ತಿರಲಿಲ್ಲವೆಂದು ಹೇಳಿದ್ದಾನೆ.ಅವನ ಸಮ್ಮುಖದಲ್ಲಿ, ಪೊಲೀಸ್ ಠಾಣೆಯಲ್ಲಿ ಯಾವುದೇ ಬೆರಳಚ್ಚು ಕಾರ್ಯ ಮಾಡದೆ ಕೈಯಲ್ಲಿ ಚ ಅದನ್ನು ಬರೆಯಲಾಗಿತ್ತು.ನಿಶಾನೆ ಪಿ .12 ರ ಅಡಿಯಲ್ಲಿ ಮಹಜರಿನ ಅಂಶಗಳನ್ನು ಅವನು ಉಕ್ತಲೇಕನ ನೀಡಿರಲಿಲ್ಲ.ಇವನನ್ನು ಬಿಟ್ಟರೆ ಇತರ ಮೂವರು ವ್ಯಕ್ತಿಗಳು ಸಹ ನಿಶಾನೆ ಪಿ .12 ಕ್ಕೆ ಸಹಿ ಹಾಕಿದ್ದಾರೆ.ಈ ಉತ್ತರಗಳನ್ನು ಹೊರತುಪಡಿಸಿದರೆ ಪ್ರಾಸಿಕ್ಯೂಷನ್ನ ಸಾಕ್ಷ್ಯವನ್ನು ನಂಬದೆ ಇರುವುದಕ್ಕೆ ಪ್ರಾ.ಸಾ .16 ರ ಬಾಯಿಯಿಂದ ಬೇರೇನನ್ನೂ ಪಡೆಯಲಾಗಲಿಲ್ಲ.ಅವಳು ಹಾಗೂ 1 ನೇ ಸಂಖ್ಯೆಯ ಆಪಾದಿತರ ನಡುವೆ ಇದ್ದ ಹಗೆತನದ ಬಗ್ಗೆ ಪ್ರಾ.ಸಾ .16 ರ ಬಾಯಿಯಿಂದ ಬೇರೇನೂ ಹೊರಬಿದ್ದಿರುವುದಿಲ್ಲ.ಆದುದರಿಂದ, 1 ನೇ ಸಂಖ್ಯೆಯ ಆಪಾದಿತನು ಪ್ರಾ.ಸಾ .16 ಕ್ಕೆ ಮೊಬೈಲನ್ನು ಮಾರಾಟ ಮಾಡಿದ್ದಕ್ಕೆ ಸಂಬಂಧಪಟ್ಟಂತೆ ವಶಪಡಿಸಿಕೊಂಡಿದ್ದನ್ನು ಸಹ ರುಜುವಾತುಪಡಿಸಲಾಗಿದ್ದು, ಇದು ಆಪಾದಿತನನ್ನು ಅಪರಾಧದೊಂದಿಗೆ ತಳುಕು ಹಾಕುವ ಮತ್ತೊಂದು ಸನ್ನಿವೇಶವಾಗಿದೆ ಹಾಗೂ ಸದಿರಿ ಸಂಗತಿಯನ್ನು ಸಹ ಅಧಿವಿಚಾರಣ ನ್ಯಾಯಾಲಯವು ಪರಿಗಣಿಸಿಲ್ಲ.

24. ಪ್ರಾಸಿಕ್ಯೂಷನ್ನು ಅವಲಂಬಿಸಿದ ಇತರ ಸನ್ನಿವೇಶಗಳೆ ೦ ದರೆ, ಜಪ್ತಿ ಮಾಡಲಾಗಿರುವ 1 ನೇ ಸಂಖ್ಯೆಯ ಆಪಾದಿತನ ದೊಣ್ಣೆ ಹಾಗೂ ಬಟ್ಟೆಗಳನ್ನು ವಶಪಡಿಸಿಕೊಂಡಿರುವುದಾಗಿದೆ.ಈ ಸಂಬಂಧದಲ್ಲಿ, ನಿಶಾನೆ ಪಿ .1 ರ ಪ್ರಕಾರ ಎಂದರೆ ಪ್ರಾ.ಸಾ .9 ರಿಂದ ಆಭರಣಗಳ ಮಹಜರನ್ನು ಸಹ ಬರೆಯಲಾಗಿತ್ತು ಹಾಗೂ ಪ್ರಾ.ಸಾ .2 ಇದರ ಬಗ್ಗೆ ನೇರವಾಗಿ ಹೇಳಿಕೆ ನೀಡಿದ್ದಾರೆ.ಪ್ರಾ.ಸಾ .3 ೧ ಕೂಡ ತನ್ನ ಹೇಳಿಕೆಯಲ್ಲಿ, ನಿಶಾನೆ ಪಿ .3 ರ ಪ್ರಕಾರ ಮಹಜರನ್ನು ಬರೆಯುವ ಮೂಲಕ ದೇಹವನ್ನು ಅಗೆದು ತೆಗೆಯಲಾಗಿತ್ತು ಎಂದು ಹೇಳಿದ್ದಾರೆ ಅಲ್ಲದೆ 1 ನೇ ಸಂಖ್ಯೆಯ ಹಾಗೂ 3 ನೇ ಸಂಖ್ಯೆಯ ಆಪಾದಿತರು, ತಾವು ಶ್ರೀಮತಿ ಕಮಲಮ್ಮನ ದೇಹವನ್ನು ಹೂತು ಹಾಕಿದ್ದ ಸ್ಥಳವನ್ನು ತೋರಿಸಿದ್ದರೆಂದು ಅವನು ಸ್ಪಷ್ಟವಾಗಿ ಹೇಳಿದ್ದಾರೆ.ಇದಾದ ನಂತರ, ಉಪವಿಭಾಗಾಧಿಕಾರಿಯವರು, ದೇಹವನ್ನು ಅಗೆದು ತೆಗೆಯಲು ಸೂಚನೆ ನೀಡಿದ್ದಾರೆ.ಪ್ರಾ.ಸಾ .4, ನೇರವಾಗಿ, 3 ನೇ ಸಂಖ್ಯೆಯ ಆಪಾದಿತನು, ತಮ್ಮನ್ನು ಕಿರಣ್ಕೆರೆಯಲ್ಲಿರುವ ಅವನ ಮನೆಗೆ ಕರೆದುಕೊಂಡು ಹೋಗಿರುವುದನ್ನು ಹಾಗೂ ಮನೆಯೊಳಗೆ ಹೋದ ನಂತರ, 3 ನೇ ಸಂಖ್ಯೆಯ ಆಪಾದಿತನು ಅರ್ಧ ತೋಳಿನ ಅಂಗಿಯನ್ನು ಹಾಗೂ ಒಂದು ಲುಂಗಿಯನ್ನು ಹಾಜರುಪಡಿಸಿದ್ದು, ನಿಶಾನೆ ಪಿ .5 ರ ಪ್ರಕಾರ ಮಹಜರನ್ನು ಬರೆಯಲಾಗಿತ್ತು ಎಂದು ಸ್ಪಷ್ಟವಾಗಿ ಹೇಳಿದ್ದಾರೆ.ಪ್ರಾ.ಸಾ .1 ರ ಪಾಟೀ-ಸವಾಲಿನಲ್ಲಿ, 3 ನೇ ಸಂಖ್ಯೆಯ ಆಪಾದಿತನಿಗೆ ಸೇರಿರುವ ಬಟ್ಟೆಗಳನ್ನು ಜಪ್ತಿ ಮಾಡುವುದರ ಬಗ್ಗೆ ಏನನ್ನೂ ಹೇಳಿರುವುದಿಲ್ಲ.ಪ್ರಾ.ಸಾ. ತನ್ನ ಸಾಕ್ಷ್ಯದಲ್ಲಿ, 1 ನೇ ಸಂಖ್ಯೆಯ ಆಪಾದಿತನು ಶ್ರೀಮತಿ ಕಮಲಮ್ಮನ ಮನೆಯ ಬಳಿ ಕರೆದುಕೊಂಡು ಬಟ್ಟೆಗಳನ್ನು ಹಾಜರುಪಡಿಸಿದ್ದಾನೆ.ನಿಶಾನೆ ಪಿ .6 ರ ಪ್ರಕಾರ ಮಹಜರನ್ನು ಬರೆಯಲಾಗಿತ್ತು ಹಾಗೂ ಕೆಂಪುಬಣ್ಣದ ಅಂಗಿ ಹಾಗೂ ಸಿಮೆಂಟ್ ಬಣ್ಣದ ಪ್ಯಾಂಟನ್ನು ಮುದ್ದೆ ಮಾಲು ಸಂ .7 ಹಾಗೂ 8 ಎಂದು ಗುರುತು ಹಾಕಲಾಗಿತ್ತು.ಅವನು ಪಾಟೀ-ಸವಾಲಿನಲ್ಲಿ, ತನ್ನ ಸಮ್ಮುಖದಲ್ಲಿ ಪೊಲೀಸರು ಯಾರನ್ನೂ ವಿಚಾರಣೆ ಮಾಡಿಲ್ಲವೆಂದು ಹಾಗೂ ನಿಶಾನೆ ಪಿ .6 ರ ಅಂಶಗಳಿಗೆ ತಾನು ಉಕ್ತಲೇಖನ ನೀಡಿಲ್ಲವೆಂದು ಹಾಗೂ ಅವರು ಪಂಚರಾಗಿ ನಿರ್ವಹಿಸಲು ಪೊಲೀಸರು ತನಗೆ ಯಾವುದೇ ಲಿಖಿತ ಮನವಿಯನ್ನು ನೀಡಿರಲಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾರೆ.ವಶಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಪ್ರಾ.ಸಾ .5 ರ ಸಾಕ್ಷ್ಯವನ್ನು ನಂಬದೆ ಇರುವುದಕ್ಕೆ ಸಾಮಾನ್ಯ ಉತ್ತರಗಳನ್ನು ಹೊರತುಪಡಿಸಿದರೆ ಬೇರೇನನ್ನೂ ಪಡೆಯಲಾಗಲಿಲ್ಲ.

25. ಆಪಾದಿತ ಸಂ .1 ಪೊದೆಯಿಂದ ದೊಣ್ಣೆಯನ್ನು ತೆಗೆದುಕೊಂಡು ಅದನ್ನು ಪೊಲೀಸರ ಮುಂದೆ ಹಾಜರುಪಡಿಸಿದನೆಂದು ಪ್ರಾ.ಸಾ .6 ಸಹ ಹೇಳಿದ್ದಾರೆ.ದೊಣ್ಣೆಯನ್ನು ಮುದ್ದೆ ಮಾಲು ಸಂ .9 ಎಂದು ಗುರುತುಹಾಕಲಾಗಿದೆ ಹಾಗೂ 3 ನೇ ಸಂಖ್ಯೆಯ ಆಪಾದಿತನೂ ಕೂಡ ಪೊದೆಯ ಕಡೆಯಿಂದ ಬಂದು, ಮುದ್ದೆ ಮಾಲು ಸಂ .10 ಎಂದು ಗುರುತಿಸಲಾಗಿರುವ ಗುದ್ದಲಿಯನ್ನು ಹಾಜರುಪಡಿಸಿದನೆಂದು ಸ್ಪಷ್ಟವಾಗಿ ಹೇಳಿದ್ದಾರೆ.ಪ್ರಾ.ಸಾ .6 ರ ಪಾಟೀ-ಸವಾಲಿನಲ್ಲಿ, ಪೊಲೀಸರು ಪಂಚನಾಗಿ ಕಾರ್ಯನಿರ್ವಹಿಸಲು ತನಗೆ ಲಿಖಿತ ನೋಟೀಸನ್ನು ನೀಡಿರಲಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾರೆ ಹಾಗೂ ಅವರು, ಆಗಸ್ಟ್ ತಿಂಗಳ ಅವಧಿಯಲ್ಲಿ ಹೆಚ್ಚು ಮಳೆ ಬೀಳುತ್ತದೆ ಹಾಗಾಗಿ ಹೆಚ್ಚಿನ ಮಳೆಯ ಕಾರಣದಿಂದ ಮರಕ್ಕೆ ಬೂಸ್ಟು ಬಂದು ಅದು ಕಪ್ಪು ಬಣ್ಣಕ್ಕೆ ತಿರುಗಿತ್ತೆಂಬುದನ್ನು ಒಪ್ಪಿಕೊಂಡಿದ್ದಾರೆ.ಪ್ರಾ.ಸಾ .6 ರ ಪಾಟೀ-ಸವಾಲಿನ ಈ ಉತ್ತರಗಳನ್ನು ಹೊರತುಪಡಿಸಿದರೆ, 1 ನೇ ಹಾಗೂ 3 ನೇ ಸಂಖ್ಯೆಯ ಆಪಾದಿತರು ಪಂಚರಾದ ಸಾಕ್ಷಿದಾರರನ್ನು ಕರೆದುಕೊಂಡು ಹೋಗಿ ಸಂಬಂಧಪಟ್ಟ ಬಟ್ಟೆಗಳು ದೇಹವನ್ನು ಹೂಳಲು ಬಳಸಿರುವ ದೊಣ್ಣೆ ಹಾಗೂ

ಗುದ್ದಲಿಯನ್ನು ಹಾಜರುಪಡಿಸಿದರೆಂಬ ಪ್ರಾಸಿಕ್ಯೂಷನ್ನ ವಾದವನ್ನು ನಂಬದೆ ಇರಲು ಬೇರೆ ಏನನ್ನೂ ಹೇಳಿರುವುದಿಲ್ಲ.ಅಪರಾಧ ನಡೆದ ಬಹುತೇಕ ನಾಲ್ಕು ತಿಂಗಳುಗಳ ನಂತರ ವಶಪಡಿಸಿಕೊಂಡಿದ್ದರೂ, ನ್ಯಾಯಾಲಯದ ಮುಂದೆ ವಿಚಾರಣೆ ಮಾಡಲಾಗಿರುವ ಎಲ್ಲಾ ಸಾಕ್ಷಿದಾರರು ಉದ್ದೇಶ 1 ಹಾಗೂ 3 ನೇ ಸಂಖ್ಯೆಯ ಆಪಾದಿತರ ಸೂಚನೆ ಮೇರೆಗೆ ಮೃತ ದೇಹದ ಶೋಧನೆ ಹಾಗೂ ಪ್ರಾ.ಸಾ .9 ಕ್ಕೆ ಮಾರಾಟ ಮಾಡಿರುವ ಒಡವೆಗಳನ್ನು ಹಾಗೂ ದೊಣ್ಣೆ, ಬಟ್ಟೆಗಳು ಹಾಗೂ ಗುದ್ದಲಿಯನ್ನು ವಶಪಡಿಸಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್ನ ವಾದವನ್ನು ನೇರವಾಗಿ ಸಮರ್ಥಿಸಿದ್ದಾರೆ.ದಾಖಲೆಯಲ್ಲಿ ಸಾಕ್ಷಾಧಾರಗಳು ಲಭ್ಯವಿದ್ದರೂ, ಅಧಿವಿಚಾರಣಾ ನ್ಯಾಯಾಧೀಶರು, ಸರಿಯಾದ ದೃಷ್ಟಿಯಿಂದ ಸಾಕ್ಷ್ಯವನ್ನು ನಿರ್ಧರಿಸುವಲ್ಲಿ ದೋಷವೆಸಗಿದ್ದಾರೆ. ಸಂಗತಿಗಳ ವ್ಯತ್ಯಾಸಗಳು, ಪ್ರಾಸಿಕ್ಯೂಷನ್ನ ವಾದಕ್ಕೆ ಮಾರಕವಾಗುವುದಿಲ್ಲ ಹಾಗೂ ಅಧಿವಿಚಾರಣಾ ನ್ಯಾಯಾಲಯವು, ಇದನ್ನು ನಿರ್ಧರಿಸುವಲ್ಲಿ ದೋಷವೆಸಗಿದೆ ಹಾಗೂ ಪ್ರಾಸಿಕ್ಯೂಷನ್ನು, ಆಪಾದಿತ ವ್ಯಕ್ತಿಗಳ ವಿರುದ್ಧ ಪ್ರಕರಣವನ್ನು ರುಜುವಾತುಪಡಿಸಿಲ್ಲವೆನ್ನುವ ದೋಷಯುಕ್ತ ನಿರ್ಣಯಕ್ಕೆ ಬಂದಿದೆ.ಆದಾಗ್ಯೂ, 2 ನೇ ಸಂಖ್ಯೆಯ ಆಪಾದಿತರು ನೇರವಾಗಿ ಭಾಗಿಯಾಗಿರುವುದಕ್ಕೆ ಸಂಬಂಧಿಸಿದಂತೆ ಯಾವ ಸಾಕ್ಷಿದಾರರೂ ಏನನ್ನೂ ಹೇಳಿಲ್ಲ ಎಂಬುದನ್ನು ಗಮನಿಸಬೇಕಾಗುತ್ತದೆ.2 ನೇ ಸಂಖ್ಯೆಯ ಆಪಾದಿತರ ವಿರುದ್ಧವಾಗಿ ಯಾವುದೇ ದೋಷಾರೋಪ ಸಾಕ್ಷ್ಯ ಎಂ ಇರುವುದಿಲ್ಲ.1 ಹಾಗೂ 3 ನೇ ಸಂಖ್ಯೆಯ ಆಪಾದಿತರ ಸೂಚನೆ ಮೇರೆಗೆ ಶೋಧನೆಯನ್ನು ಮಾಡಲಾಗಿದ್ದು, 2 ನೇ ಸಂಖ್ಯೆಯ ಆಪಾದಿತರು ಸ್ಥಳಕ್ಕೆ ಪಂಚರನ್ನು ಕರೆದುಕೊಂಡು ಬಂದರೆದು ಯಾವ ಸಾಕ್ಷಿದಾರರೂ ಹೇಳಿರುವುದಿಲ್ಲ ಎಂಬುದನ್ನು ಗಮನಿಸಬೇಕಾಗುತ್ತದೆ.1 ಹಾಗೂ 3 ನೇ ಸಂಖ್ಯೆಯ ಆಪಾದಿತರು ಮಾತ್ರ ಪಂಚರನ್ನು ಕರೆದುಕೊಂಡು 1 ಹಾಗೂ 3 ನೇ ಸಂಖ್ಯೆಯ ಆಪಾದಿತರ ಸೂಚನೆ ಮೇರೆಗೆ ದೇಹವನ್ನು ಶೋಧಿಸಲಾಗಿತ್ತೆ ವಿನಾಃ 2 ನೇ ಸಂಖ್ಯೆ ಆಪಾದಿತರ ಸೂಚನೆಯ ಮೇರೆಗೆ ಅಲ್ಲ ಎಂಬುದು ಪ್ರಾಸಿಕ್ಯುಷನ್ನ ವಾದವಾಗಿದೆ.2 ನೇ ಸಂಖ್ಯೆಯ ಆಪಾದಿತರ ಸೂಚನೆ ಮೇರೆಗೆ ಶೋಧನೆಯನ್ನು ಮಾಡಿರುವುದಿಲ್ಲ.ಹೀಗಾಗಿ, ನಾವು, 2 ನೇ ಸಂಖ್ಯೆಯ ಆಪಾದಿತರನ್ನು ಖುಲಾಸೆಗೊಳಿಸುವಲ್ಲಿ ವಿಚಾರಣಾ ನ್ಯಾಯಾಲಯವು ಯಾವುದೇ ದೋಷವೆಸಗಿರುವುದಿಲ್ಲ, ಆದರೆ 1 ಹಾಗೂ 3 ನೇ ಸಂಖ್ಯೆಯ ಆಪಾದಿತರ ವಿರುದ್ಧ ಸಾಕ್ಷ್ಯವನ್ನು ನಿರ್ಧರಿಸುವಲ್ಲಿ ದೋಷವೆಸಗಿದೆಯೆಂದು ಅಭಿಪ್ರಾಯಪಡುತ್ತೇವೆ.ಆದುದರಿಂದ ನಾವು, 1 ಹಾಗೂ 2 ನೇ ಸಂಖ್ಯೆಯ ಆಪಾದಿತರ ವಿರುದ್ಧ ಪ್ರಾಸಿಕ್ಯೂಷನ್ನ ವಾದವನ್ನು ನಂಬುವುದಕ್ಕೆ ಸಾಕಷ್ಟು ಸಾಕ್ಷ್ಯಾಧಾರವಿದೆಯೆಂದು ಅಭಿಪ್ರಾಯಪಡುತ್ತೇವೆ.

26. ದಾಖಲೆಯಲ್ಲಿರುವ ಸಾಕ್ಷ್ಯಾಧಾರವು, 1 ನೇ ಸಂಖ್ಯೆಯ ಆಪಾದಿತನು ಕೊಲೆಯನ್ನು ಮಾಡಿದ್ದು, ಕೊಲೆ ಮಾಡಿದ ನಂತರ ಅವನು ಮೃತರಿಗೆ ಸೇರಿದ ಒಡವೆಗಳನ್ನು ತೆಗೆದುಕೊಂಡು, ಅದನ್ನು ಪ್ರಾ.ಸಾ .9 ಕ್ಕೆ ಮಾರಾಟಮಾಡಿದ್ದು, ಅದನ್ನು ಸಹ ಶೋಧಿಸಲಾಗಿದೆ ಹಾಗೂ ಅವನು ಮೊಬೈಲ್ ಫೋನನ್ನು ಪ್ರಾ.ಸಾ .16 ಕ್ಕೆ ಮಾರಾಟ ಮಾಡಿದ್ದಾನೆ ಎಂಬುದನ್ನು ಬಹಿರಂಗಪಡಿಸುತ್ತವೆ.ಪರಸ್ಪರ ಒಂದಕ್ಕೊಂದು ಸಂಬಂಧವಿರುವ ಈ ಎಲ್ಲಾ ಸಾಕ್ಷ್ಯವು ಒಂದನೇಯ ಆಪಾದಿತನು ಮಾತ್ರ ಕೊಲೆಯನ್ನು ಮಾಡಿ ಆ ನಂತರ 1 ನೇಯ ಆಪಾದಿತನು ಸಾಕ್ಷ್ಯವನ್ನು ಮರೆಮಾಚುವ ಸಲುವಾಗಿ 3 ನೇ ಸಂಖ್ಯೆಯ ಆಪಾದಿತನ ನೆರವನ್ನು ಪಡೆದುಕೊಂಡು, ಮೃತದೇಹವನ್ನು ಹೂತುಹಾಕಿದ್ದಾನೆ ಎಂಬುದನ್ನು ತೋರಿಸುತ್ತವೆ.ಮೃತಳ ಮೇಲೆ ಹಲ್ಲೆ ಮಾಡಲು ತದನಂತರ ದೇಹವನ್ನು ಹೂಳಲು ಬಳಸಿದ ದೊಣ್ಣೆ ಹಾಗೂ ಗುದ್ದಲಿಯಂತಹ ಸಾಧನಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ.ಈ ಸಂಗತಿಗಳನ್ನು ಅಧಿವಿಚಾರಣಾ ನ್ಯಾಯಾಲಯವು ಪರಿಗಣಿಸಿರುವುದಿಲ್ಲ.ಹೀಗಾಗಿ ನಾವು, ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು 1 ನೇ ಹಾಗೂ 2 ನೇ ಆಪಾದಿತರಿಗೆ ಸಂಬಂಧಪಡುವಷ್ಟರಮಟ್ಟಿಗೆ ವಿಪರ್ಯಯಗೊಳಿಸುವ ಅಗತ್ಯವಿದೆಯೆಂದು ಅಭಿಪ್ರಾಯಪಡುತ್ತೇವೆ.

27. ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯವನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ ಹಾಗೂ ಸಾಂದರ್ಭಿಕ ಸನ್ನಿವೇಶಕ್ಕೆ ಅದರಲ್ಲೂ ನಿರ್ದಿಷ್ಟವಾಗಿ 1 ನೇ ಹಾಗೂ 3 ನೇ ಸಂಖ್ಯೆಯ ಆಪಾದಿತರ ಸೂಚನೆ ಮೇರೆಗೆ ಮೃತ ದೇಹವನ್ನು ಶೋಧಿಸಿರುವುದನ್ನು ಆತಂಕಪೂರ್ಣವಾಗಿ ಪರಿಗಣಿಸಿರುತ್ತೇವೆ.ಮೃತರನ್ನು ಕೊಲೆ ಮಾಡುವಲ್ಲಿ ಅ 1 ನೇ ಸಂಖ್ಯೆಯ ಆಪಾದಿತನೊಟ್ಟಿಗೆ 3 ನೇ ಸಂಖ್ಯೆಯ ಆಪಾದಿತರು ಭಾಗಿಯಾಗಿರುವುದನ್ನು ತೋರಿಸಲು ಯಾವುದೇ ಸಾಕ್ಷಾಧಾರವನ್ನು ಹಾಜರುಪಡಿಸಿಲ್ಲ ಹಾಗೂ 1 ನೇ ಸಂಖ್ಯೆಯ ಆಪಾದಿತನ ಸೂಚನೆ ಮೇರೆಗೆ ಸಾಕ್ಷ್ಯವನ್ನು ಮರೆಮಾಚಲು ಮಾತ್ರ ಅವನು ನೆರವಾಗಿರುತ್ತಾನೆ.ಹೀಗಾಗಿ, 3 ನೇ ಆಪಾದಿತನು ಭಾರತ ದಂಡ ಸಂಹಿತೆಯ 201 ನೇ ಪ್ರಕರಣದ ಮೇರೆಗೆ ದಂಡಿಸಲು ಅರ್ಹನಾಗಿದ್ದು, 1 ನೇ ಸಂಖ್ಯೆಯ ಆಪಾದಿತನು, ಭಾರತ ದಂಡ ಸಂಹಿತೆಯ 302 ನೇ ಪ್ರಕರಣ ಹಾಗೂ 201 ನೇ ಪ್ರಕರಣದ ಮೇರೆಗೆ ದಂಡನೀಯವಾಗುವ ಅಪರಾಧಗಳಿಗೆ ಅಪರಾಧಿಯೆಂದು ನಿರ್ಣಯಿಸಲು ಅರ್ಹರಾಗಿರುತ್ತಾನೆ.1 ಹಾಗೂ 2 ನೇ ಸಂಖ್ಯೆಯ

ಆಪಾದಿತರು ಮೃತಳನ್ನು ಕೊಲೆಮಾಡಲು ಒಬ್ಬರಿಗೊಬ್ಬರು ಸಂಚು ಮಾಡಿದ್ದರು ನಿರ್ಣಯಕ್ಕೆ ಬರಲು ಯಾವುದೇ ಸಾಕ್ಷ್ಯಾಧಾರವಿರುವುದಿಲ್ಲ ಹಾಗೂ 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರ ವಿರುದ್ಧ ಆರೋಪಿಸಲಾದಂತೆ ಭಾರತ ದಂಡ ಸಂಹಿತೆಯ 120 (ಬಿ) ಪ್ರಕರಣದ ವ್ಯಾಪ್ತಿಯೊಳಗೆ 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರನ್ನು ತರಲು ಯಾವುದೇ ಸಾಕ್ಷ್ಯಾಧಾರ ಇರುವುದಿಲ್ಲ.ಭಾರತ ದಂಡ ಸಂಹಿತೆಯ 379 ನೇ ಪ್ರಕರಣದ ಮೇರೆಗೆ ಇತರ ಅಪರಾಧಕ್ಕೆ ಸಂಬಂಧಿಸಿದಂತೆ, ಒಡವೆಗಳನ್ನು ವಶಪಡಿಸಿಕೊಂಡ ಬಗ್ಗೆ ಯಾವುದೇ ಸಂದೇಹವಿರುವುದಿಲ್ಲ ಹಾಗೂ ಆಪಾದಿತನನ್ನು ಭಾರತ ದಂಡ ಸಂಹಿತೆಯ 379 ನೇ ಪ್ರಕರಣದ ಪರಧಿಯೊಳಗೆ ತರಲು ಯಾವುದೇ ಸಾಕ್ಷ್ಯಾಧಾರಗಳು ಇರುವುದಿಲ್ಲ.ಕೊಲೆಯನ್ನು ಮಾಡಿದ ನಂತರ ನ್ಯಾಯಬಾಹಿರವಾದ ಪ್ರಯೋಜನ ಪಡೆಯುವುದಕ್ಕೆ ಇದನ್ನು ಸೇರಿಸಲಾಗಿತ್ತು.

28. ಮೇಲಿನ ಚರ್ಚೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಈ ಮುಂದಿನ ಆದೇಶವನ್ನು ಹೊರಡಿಸಿದ್ದೇವೆ.

ಆದೇಶ

1) ಅಪೀಲನ್ನು ಭಾಗಶಃ ಪುರಸ್ಕರಿಸಲಾಗಿದೆ.

ii) ದಿನಾಂಕ 20-12-2012 ರ ಅಧಿವಿಚಾರಣಾ ನ್ಯಾಯಾಲಯದ ಪ್ರಶ್ನಿತ ತೀರ್ಪನ್ನು 1 ಹಾಗೂ 3 ನೇ ಆಪಾದಿತರಿಗೆ ಸಂಬಂಧಪಡುವಷ್ಟರಮಟ್ಟಿಗೆ ತಳ್ಳಿಹಾಕಲಾಗಿದೆ.

iii) 1 ನೇ ಸಂಖ್ಯೆಯ ಆಪಾದಿತನನ್ನು, ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಅಪರಾಧಿ ಯೆ ೦ ದು ನಿರ್ಣಯಿಸಲಾಗಿದೆ.ಇವನನ್ನು, 25,000/- ರೂ.ಗಳ ಜುಲ್ಮಾನೆಯೊಂದಿಗೆ ಆಜೀವ ಸಾದಾ ಕಾರಾವಾಸ ಶಿಕ್ಷೆಗೆ ಒಳಪಡಿಸಲಾಗಿದೆ.ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ ಸಂದರ್ಭದಲ್ಲಿ ಆರು ತಿಂಗಳುಗಳ ಹೆಚ್ಚಿನ ಅವಧಿಗೆ ಸಾದಾ ಕಾರಾವಾಸ ಶಿಕ್ಷೆಗೆ ಒಳಪಡಿಸಬೇಕು.1 ನೇ ಸಂಖ್ಯೆಯ ಆಪಾದಿತನನ್ನು ಸಹ ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 201 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕೆ ಅಪರಾಧಿಯೆಂದು ನಿರ್ಣಯ ಮಾಡಲಾಗಿದೆ.ತದನುಸಾರವಾಗಿ, 5,000/- ರೂ.ಗಳ ಜುಲ್ಮಾನೆಯೊಂದಿಗೆ ಐದು ವರ್ಷಗಳ ಅವಧಿಗೆ ಸಾದಾ ಕಾರಾವಾಸ ಶಿಕ್ಷೆಗೆ ಒಳಪಡಿಸಲಾಗಿದೆ.ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದಲ್ಲಿ, ಅವನನ್ನು ಎರಡು ತಿಂಗಳುಗಳ ಹೆಚ್ಚಿನ ಅವಧಿಗೆ ಕಾರಾವಾಸ ಶಿಕ್ಷೆಗೆ ಒಳಪಡಿಸಬೇಕು.ಶಿಕ್ಷೆಗಳನ್ನು ಏಕಕಾಲದಲ್ಲಿ ಅನುಭವಿಸತಕ್ಕದ್ದು.

iv) 3 ನೇ ಸಂಖ್ಯೆಯ ಆಪಾದಿತನನ್ನು ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 201 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕೆ ಅಪರಾಧಿಯೆಂದು ನಿರ್ಣಯಿಸಲಾಗಿದೆ.ತದನುಸಾರವಾಗಿ, ಇವನನ್ನು, 5,000/- ರೂ.ಗಳ ಜುಲ್ಮಾನೆಯೊಂದಿಗೆ ಮೂರು ವರ್ಷಗಳ ಅವಧಿಗೆ ಸಾದಾ ಕಾರಾವಾಸ ಶಿಕ್ಷೆಗೆ ಒಳಪಡಿಸಲಾಗಿದೆ.ಜುಲ್ಮಾನೆಯನ್ನು ಕಟ್ಟಲು ತಪ್ಪಿದ ಸಂದರ್ಭದಲ್ಲಿ, ಇವನನ್ನು ಎರಡು ತಿಂಗಳುಗಳ ಹೆಚ್ಚಿನ ಅವಧಿಗೆ ಸಾದಾ ಕಾರಾವಾಸ ಶಿಕ್ಷೆಗೆ ಒಳಪಡಿಸಬೇಕು.

v) 35,000/- ರೂ.ಗಳ ಜುಲ್ಮಾನ ಮೊತ್ತದ ಪೈಕಿ 25,000/ ರೂ. ಮೊತ್ತವನ್ನು ಪ್ರಾ.ಸಾ .1 ಕ್ಕೆ ಹಾಗೂ ಯುಕ್ತವಾಗಿ ಗುರುತಿಸಿದ ನಂತರ ಅವಳ ಮತ್ತೊಬ್ಬ ಸೋದರಿಗೆ ಸಮವಾಗಿ ಸಂದಾಯ ಮಾಡುವುದು.

vi) 2 ನೇ ಸಂಖ್ಯೆಯ ಆಪಾದಿತನ ವಿರುದ್ಧ ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಹೊರಡಿಸಿದ ಪ್ರಶ್ನಿತ ತೀರ್ಪನ್ನು ಈ ಮೂಲಕ ಸ್ಥಿರೀಕರಿಸಲಾಗಿದೆ.

vii) ವಿಚಾರಣಾ ನ್ಯಾಯಾಲಯವು, 1 ನೇ ಹಾಗೂ 3 ನೇ ಸಂಖ್ಯೆಯ ಆಪಾದಿತರನ್ನು ಬಂಧಿಸಿ ಅವರನ್ನು ಶಿಕ್ಷೆಗೆ ಒಳಪಡಿಸಲು ನಿರ್ದೇಶಿಸಲಾಗಿದೆ.3 ನೇ ಸಂಖ್ಯೆಯ ಆಪಾದಿತರು, ಅಧಿವಿಚಾರಣೆ ನಡೆಯುವ ಅವಧಿಯಲ್ಲಿ ಅಭಿರಕ್ಷೆಯಲ್ಲಿದ್ದರೆ, ದಂಡ ಪ್ರಕ್ರಿಯಾ ಸಂಹಿತೆಯ 428 ನೇ ಪ್ರಕರಣದ ಮೇರೆಗೆ ವಜಾವಟ್ಟು ಮಾಡುವ ಪ್ರಯೋಜನಕ್ಕೆ ಅವನು ಹಕ್ಕುಳ್ಳವನಾಗಿರುವನು ಎಂದು ತಿಳಿಸುವ ಅಗತ್ಯವಿಲ್ಲ.